# ನಗರ ಯೋಜನಾ ಪ್ರಾಧಿಕಾರ, ಚಿತ್ತಾಪೂರ.

ಬಜಾಜ್ ಕಾಂಪ್ಲೆಕ್ಸ್ ಮೊದಲನೆ ಮಹಡಿ, ಕೋಣೆ ಸಂಖ್ಯೆ: ಬಿ71, ಬಸ್ ನಿಲ್ದಾಣ ರಸ್ತೆ, ಚಿತ್ತಾಪೂರ-585211
ತಾ: ಚಿತ್ತಾಪೂರ ಜಿ: ಕಲಬುರಗಿ, Gmail: mstpachittapur56@gmail.com

ಸಂಖ್ಯೆ:ನಯೋಪ್ರಾಚಿ/ಕಛೇರಿ ಆದೇಶ/2023-24/ ದಿನಾಂಕ: 05/03/2024

ಇವರಿಗೆ,
ಮಾನ್ಯ ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ
ಬೆಂಗಳೂರು.

ಮಾನ್ಯರೆ,

ವಿಷಯ: ಚಿತ್ತಾಪೂರ ನಗರ ಯೋಜನಾ ಪ್ರಾಧಿಕಾರದ 2017-18, 2019-20 ಮತ್ತು 2020-21ನೇ ಸಾಲಿನ ವಾರ್ಷಿಕ ವರದಿಗಳನ್ನು ಹಾಗೂ 2012-13-2017-18, 2018-19, 2019-20 ಮತ್ತು 2020-21ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗಳ ಬುಕ್‌ಲೆಟ್‌ಗಳು ಮತ್ತು ಸಿ.ಡಿ ಗಳನ್ನು ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಕಾರ್ಯದರ್ಶಿ ಕರ್ನಾಟಕ ವಿಧಾನ ಸಭೆ ಸಚಿವಾಲಯ ಬೆಂಗಳೂರು ಇವರ ಪತ್ರ ಸಂಖ್ಯೆ:ಅ.ಸ.ಪ.ಕವಿಸಸ/ಸಕಾಪ/104/ನ.ಇ/2023-24 ದಿನಾಂಕ:29-02-2024

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದನ್ವಯ ಚಿತ್ತಾಪೂರ ನಗರ ಯೋಜನಾ ಪ್ರಾಧಿಕಾರದ 2017-18, 2019-20 ಮತ್ತು 2020-21ನೇ ಸಾಲಿನ ವಾರ್ಷಿಕ ವರದಿಗಳನ್ನು ಹಾಗೂ 2012-13-2017-18, 2018-19, 2019-20 ಮತ್ತು 2020-21ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗಳ 50 ಸೆಟ್‌ಗಳನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಲಾಗಿದೆ.

ಅದರಂತೆ ಸಮಿತಿಯಿಂದ ಕೋರಲಾದ ಮಾಹಿತಿಯನ್ನು ಕಾರಣಗಳನ್ನೊಳಗೊಂಡ ಟಿಪ್ಪಣಿಯನ್ನು ಸಲ್ಲಿಸಲಾಗಿರುವ ನಮೂನೆಯ ರೀತ್ಯಾ ಕನ್ನಡ 50 ಪ್ರತಿಗಳು ಮತ್ತು 250 ಸಿ.ಡಿ.ಗಳನ್ನು ಹಾಗೂ ಮಾಹಿತಿಯನ್ನು ನಮೂನೆಯಲ್ಲಿ ಭರ್ತಿ ಮಾಡಿ ತಮ್ಮ ಅವಗಾಹನೆಗಾಗಿ ಗೌರವಪೂರಕವಾಗಿ ಸಲ್ಲಿಸಲಾಗಿದೆ.

5/3/24 5/3/2024

ಸಹಿ
ಸದಸ್ಯ ಕಾರ್ಯದರ್ಶಿ,
ನಗರ ಯೋಜನಾ ಪ್ರಾಧಿಕಾರ,
ಚಿತ್ತಾಪೂರ

**ಯಥಾಪ್ರತಿಯನ್ನು:-**

01. ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು. ಇವರ ಮಾಹಿತಿಗಾಗಿ.
02. ಕಛೇರಿ ಪ್ರತಿ.

5/3/2024
ಸದಸ್ಯ ಕಾರ್ಯದರ್ಶಿ,
ನಗರ ಯೋಜನಾ ಪ್ರಾಧಿಕಾರ,
ಚಿತ್ತಾಪೂರ.

→ ಪ್ರ.ತಿ.ನೋ.

# ನಗರ ಯೋಜನಾ ಪ್ರಾಧಿಕಾರ, ಚಿತ್ತಾಪೂರ.

ಬಜಾಜ್ ಕಾಂಪ್ಲೆಕ್ಸ್ ಮೊದಲನೆ ಮಹಡಿ, ಕೋಣೆ ಸಂಖ್ಯೆ: ಬಿ71, ಬಸ್ ನಿಲ್ದಾಣ ರಸ್ತೆ, ಚಿತ್ತಾಪೂರ-585211
**ತಾ: ಚಿತ್ತಾಪೂರ ಜಿ: ಕಲಬುರಗಿ, Gmail: mstpachittapur56@gmail.com**

ಸಂಖ್ಯೆ:ನಯೋಪ್ರಾಚಿ/ಕಛೇರಿ ಆದೇಶ/2023-24/ ದಿನಾಂಕ: 05/3/2024

ಇವರಿಗೆ,

ಮಾನ್ಯ ಸರ್ಕಾರದ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ
ಬೆಂಗಳೂರು.

ಮಾನ್ಯರೆ,

ವಿಷಯ: ಚಿತ್ತಾಪೂರ ನಗರ ಯೋಜನಾ ಪ್ರಾಧಿಕಾರದ 2021-22 ಮತ್ತು 2022-23ನೇ ಸಾಲಿನ ವಾರ್ಷಿಕ ವರದಿಗಳನ್ನು ಹಾಗೂ 2021-22 ಮತ್ತು 2022-23ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗಳ ಬುಕ್‌ಲೆಟ್‌ಗಳು ಮತ್ತು ಸಿ.ಡಿ ಗಳನ್ನು ಸರ್ಕಾರಕ್ಕೆ ಸಲ್ಲಿಸುವ ಬಗ್ಗೆ.

ಉಲ್ಲೇಖ: ಮಾನ್ಯ ಕಾರ್ಯದರ್ಶಿ ಕರ್ನಾಟಕ ವಿಧಾನ ಸಭೆ ಸಚಿವಾಲಯ ಬೆಂಗಳೂರು ಇವರ ಪತ್ರ ಸಂಖ್ಯೆ:ಅ.ಸ.ಪ.ಕವಿಸಸ/ಸಕಾಪ/104/ನ.ಇ/2023-24 ದಿನಾಂಕ:29-02-2024

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖದನ್ವಯ ಚಿತ್ತಾಪೂರ ನಗರ ಯೋಜನಾ ಪ್ರಾಧಿಕಾರದ 2021-22 ಮತ್ತು 2022-23ನೇ ಸಾಲಿನ ವಾರ್ಷಿಕ ವರದಿಗಳನ್ನು ಹಾಗೂ 2021-22 ಮತ್ತು 2022-23ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಗಳ 50 ಸೆಟ್‌ಗಳನ್ನು ಸರ್ಕಾರಕ್ಕೆ ಸಲ್ಲಿಸಲು ಸೂಚಿಸಲಾಗಿದೆ.

ಅದರಂತೆ ಸಮಿತಿಯಿಂದ ಕೋರಲಾದ ಮಾಹಿತಿಯನ್ನು ಕಾರಣಗಳನ್ನೊಳಗೊಂಡ ಟಿಪ್ಪಣಿಯನ್ನು ಸಲ್ಲಿಸಲಾಗಿರುವ ನಮೂನೆಯ ರೀತ್ಯಾ ಕನ್ನಡ 50 ಪ್ರತಿಗಳು ಮತ್ತು 250 ಸಿ.ಡಿ.ಗಳನ್ನು ಹಾಗೂ ಮಾಹಿತಿಯನ್ನು ನಮೂನೆಯಲ್ಲಿ ಭರ್ತಿ ಮಾಡಿ ತಮ್ಮ ಅವಗಾಹನೆಗಾಗಿ ಗೌರವಪೂರಕವಾಗಿ ಸಲ್ಲಿಸಲಾಗಿದೆ.

ಸದಸ್ಯ ಕಾರ್ಯದರ್ಶಿ,
ನಗರ ಯೋಜನಾ ಪ್ರಾಧಿಕಾರ,
ಚಿತ್ತಾಪೂರ

**ಯಥಾಪ್ರತಿಯನ್ನು:-**

01. ಮಾನ್ಯ ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ, ಬೆಂಗಳೂರು. ಇವರ ಮಾಹಿತಿಗಾಗಿ.
02. ಕಛೇರಿ ಪ್ರತಿ.

5/3/2024

ಸದಸ್ಯ ಕಾರ್ಯದರ್ಶಿ,
ನಗರ ಯೋಜನಾ ಪ್ರಾಧಿಕಾರ,
ಚಿತ್ತಾಪೂರ.

ಕರ್ನಾಟಕ ಸರ್ಕಾರ

# ಕರ್ನಾಟಕರಾಜ್ಯ ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ

ಜಂಟಿ ನಿರ್ದೇಶಕರ ಕಾರ್ಯಾಲಯ

ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಕಲಬುರಗಿ

# 2012-13 ರಿಂದ 2017-18ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

## ನಗರ ಯೋಜನಾ ಪ್ರಾಧಿಕಾರ ಚಿತ್ತಾಪೂರ

ಭಾಗ-1

# ನಗರ ಯೋಜನಾ ಪ್ರಾಧಿಕಾರ ಚಿತ್ತಾಪುರ

## 2012-13 ರಿಂದ 2017-18ನೇ ಸಾಲಿನ ವರೆಗಿನ ಲೆಕ್ಕ ತಪಾಸಣಾ ವರದಿ

**ಪೀಠಿಕೆ:-**

ಸರ್ಕಾರದ ನಗರಾಭಿವೃದ್ಧಿ ಸಚಿವಾಲಯ ಬೆಂಗಳೂರು ಆದೇಶ ಸಂಖ್ಯೆ: ನಅಇ 193 ಗುಅಪ್ರಾ 2011 ದಿನಾಂಕ: 12-03-2012 ರಲ್ಲಿ ಸ್ಥಳೀಯ ಯೋಜನಾ ಪ್ರದೇಶಕ್ಕೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 4(ಎ) ರನ್ವಯ ಸ್ಥಳೀಯ ಯೋಜನಾ ಪ್ರಾಧಿಕಾರವನ್ನು ಘೋಷಿಸಲಾಗಿದೆ. ತದನಂತರ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಕಲಂ 4 (ಸಿ)(3)ರನ್ವಯ ಚಿತ್ತಾಪುರ ಯೋಜನಾ ಪ್ರಾಧಿಕಾರವನ್ನು ರಚಿಸಲಾಗಿರುತ್ತದೆ.

ಸದರಿ ಅಧಿಸೂಚನೆಯಲ್ಲಿ ಅಧ್ಯಕ್ಷರು, ಸದಸ್ಯ ಕಾರ್ಯದರ್ಶಿ ಸೇರಿದಂತೆ ಇತರೆ ಪದಾಧಿಕಾರಿಗಳ ಸಂಖ್ಯೆಯನ್ನು ಉಲ್ಲೇಖಿಸಿದ್ದು, ಸದರಿ ಅಧಿಸೂಚನೆಯಲ್ಲಿ ನಗರ ಯೋಜನಾ ಸಹಾಯಕ ನಿರ್ದೇಶಕರು ಕಲಬುರಗಿ ಇವರನ್ನು ಸದಸ್ಯ ಕಾರ್ಯದರ್ಶಿಯನ್ನಾಗಿ ನೇಮಿಸಲಾಗಿದೆ; ಹಾಗೂ ಸದರಿ ಯೋಜನಾ ಪ್ರಾಧಿಕಾರವು ದಿನಾಂಕ: 26-04-2012 ರಿಂದ ಜಾರಿಗೆ ಬರುವಂತೆ 2012-13ನೇ ಸಾಲಿನಿಂದ ಅಸ್ತಿತ್ವಕ್ಕೆ ಬಂದಿರುತ್ತದೆ.

ಜಂಟಿ ನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಕಛೇರಿ ಕಲಬುರಗಿ ಇವರ ಪತ್ರ ಸಂಖ್ಯೆ: ಸ್ಥಲೆವ/ಆಡಿಟ್/ನ.ಯೋ.ಪ್ರಾ.ಚಿತ್ತಾಪೂರ/2018-19/851 ದಿನಾಂಕ: 24-12-2018 ರಲ್ಲಿ ಸದರಿ ಯೋಜನಾ ಪ್ರಾಧಿಕಾರದ 2006-07 ರಿಂದ 2017-18ನೇ ಸಾಲಿನವರೆಗಿನ, ಲೆಕ್ಕ ಪರಿಶೋಧನೆಯನ್ನು ದಿನಾಂಕ: 02-01-2019 ರಿಂದ 31-01-2019 ರವರೆಗೆ ಕೈಕೊಳ್ಳಲು ಸೂಚಿಸಲಾಗಿತ್ತು. ಆದರೆ ಸದಸ್ಯ ಕಾರ್ಯದರ್ಶಿ ನಗರ ಯೋಜನಾ ಪ್ರಾಧಿಕಾರ ಚಿತ್ತಾಪುರ ಇವರು ತಮ್ಮ ಪತ್ರ ಸಂಖ್ಯೆ: ನಯೋಪ್ರಾಚಿ/ಲೆ.ಪ/2018-19/218 ದಿನಾಂಕ: 09-01-2018ರಲ್ಲಿ ಪತ್ರ ನೀಡಿ ಸದರಿ ಪ್ರಾಧಿಕಾರವು 2012-13 ನೇ ಸಾಲಿನಿಂದ ಪ್ರಾರಂಭವಾಗಿರುವುದರಿಂದ; 2012-13 ರಿಂದ 2017-18ನೇ ಸಾಲಿನವರೆಗಿನ ಲೆಕ್ಕ ಪರಿಶೋಧನೆ ಕೈಗೊಳ್ಳಲು ಕೋರಿರುತ್ತಾರೆ.

ಕಾರಣ, ನಗರ ಯೋಜನಾ ಪ್ರಾಧಿಕಾರ ಚಿತ್ತಾಪುರ ಈ ಕಛೇರಿಯ 2012-13 ರಿಂದ 2017-18ನೇ ಸಾಲಿನವರೆಗಿನ ಶಾಸನಬದ್ಧ ಲೆಕ್ಕ ಪರಿಶೋಧನೆಯು ಕೈಗೊಳ್ಳಲಾಗಿದೆ.

ಅ) ಸಾಮಾನ್ಯ ವಿವರ:

1) ಅಧ್ಯಕ್ಷರು

: ಶ್ರೀ ಡಿ.ಕೆ. ರವಿ, ಭಾ.ಆ.ಸೇ,
ಉಪ ವಿಭಾಗಾಧಿಕಾರಿ ಸೇಡಂ 26-4-2012 ರಿಂದ 23-2-2013

: ಶ್ರೀಮತಿ ಬಿ. ವಿಜಯಾ ಜ್ಯೋತ್ಸ್ನಾ, ಭಾ.ಆ.ಸೇ
ಉಪ ವಿಭಾಗಾಧಿಕಾರಿ ಸೇಡಂ 23-2-13 ರಿಂದ 15-6-2013

; ಶ್ರೀ ಹರ್ಷಾ ಎಸ್. ಶೆಟ್ಟಿ, ಕೆ.ಎ.ಎಸ್
ಉಪ ವಿಭಾಗಾಧಿಕಾರಿ ಸೇಡಂ, 15-6-2013 ರಿಂದ 4-9-2013

: ಶ್ರೀಮತಿ ಬಿ. ವಿಜಯಾ ಜ್ಯೋತ್ಸ್ನಾ, ಭಾ.ಆ.ಸೇ
ಉಪ ವಿಭಾಗಾಧಿಕಾರಿ ಸೇಡಂ 4-9-2013 ರಿಂದ 31-12-2013

: ಶ್ರೀ ಪ್ರಕಾಶ ಬಿ. ಕುದರಿ, ಕೆ.ಎ.ಎಸ್,
ಉಪ ವಿಭಾಗಾಧಿಕಾರಿ ಸೇಡಂ, 31-12-2013 ರಿಂದ 5-3-2014

: ಶ್ರೀ ಭೀಮಾಶಂಕರ, ಕೆ.ಆ.ಸೇ,
ಉಪ ವಿಭಾಗಾಧಿಕಾರಿ ಸೇಡಂ, 5-3-2014 ರಿಂದ 11-3-2015

: ಶ್ರೀ ಈರಪ್ಪ ಸಾಯಿಬಣ್ಣ ಭೋವಿ, ಸಾ: ಚಿತ್ತಾಪೂರ
11-3-2015 ರಿಂದ 28-8-2016

: ಶ್ರೀ ಭೀಮಾಶಂಕರ, ಕೆ.ಆ.ಸೇ,
ಉಪ ವಿಭಾಗಾಧಿಕಾರಿ ಸೇಡಂ, 29-8-2016 ರಿಂದ 30-1-2017

: ಶ್ರೀ ಸೂರ್ಯಕಾಂತ ಬಿ. ಪೂಜಾರಿ ಸಾ: ಚಿತ್ತಾಪೂರ
30-1-2017 ರಿಂದ 4-6-2018

: ಡಾ॥ ಬಿ. ಸುಶೀಲಾ, ಉಪ ವಿಭಾಗಾಧಿಕಾರಿ ಸೇಡಂ,
4-6-2018 ರಿಂದ 31-3-2018

2) ಸದಸ್ಯ/ಕಾರ್ಯದರ್ಶಿ : ಶ್ರೀ ಪ್ರಕಾಶ, ಸಿ. ಹರಕುಡೆ ಸಹಾಯಕ ನಿರ್ದೇಶಕರು, ನ ಮತ್ತು ಗ್ರಾ ಯೋ. ಇಲಾಖೆ ಕಲಬುರಗಿ 21-6-2012 ರಿಂದ 8-11-2012

: ಶ್ರೀ ಜಗದೀಶ ಎಸ್. ಡೋಶೆಟ್ಟಿ, ಸಹಾಯಕ ನಿರ್ದೇಶಕರು, ನ ಮತ್ತು ಗ್ರಾ ಯೋ. ಇಲಾಖೆ ಕಲಬುರಗಿ 8-11-2012 ರಿಂದ 21-01-2013

: ಶ್ರೀ ಸುನೀಲ, ಸಹಾಯಕ ನಿರ್ದೇಶಕರು, ನ ಮತ್ತು ಗ್ರಾ ಯೋ. ಇಲಾಖೆ ಕಲಬುರಗಿ 21-1-2013 ರಿಂದ 23-7-2015

: ಶ್ರೀ ಪ್ರಕಾಶ, ಸಿ. ಹರಕುಡೆ ಸಹಾಯಕ ನಿರ್ದೇಶಕರು, ನ ಮತ್ತು ಗ್ರಾ ಯೋ. ಇಲಾಖೆ ಕಲಬುರಗಿ 23-7-2015 ರಿಂದ 31-7-2015

: ಶ್ರೀ ವಿಷ್ಣು ಹೆಚ್. ಬಂಡಾರಿ, ಸಹಾಯಕ ನಿರ್ದೇಶಕರು, ನ ಮತ್ತು ಗ್ರಾ ಯೋ. ಇಲಾಖೆ ಕಲಬುರಗಿ 31-7-2015 ರಿಂದ 12-5-2016

: ಶ್ರೀ ತಿಪ್ಪಣ್ಣ ಎಸ್. ಮಾಂಗ್, ಸಹಾಯಕ ನಿರ್ದೇಶಕರು ನ ಮತ್ತು ಗ್ರಾ ಯೋ. ಇಲಾಖೆ ಕಲಬುರಗಿ 12-5-2016 ರಿಂದ 31-3-2018

ಬ) ಲೆಕ್ಕ ತನಿಖಾತಂಡದ ಮಾಹಿತಿ:

1) ಲೆಕ್ಕ ಪರಿಶೋಧಕರು : ಶ್ರೀ ಎನ್. ಜಯರಾಜು , ಲೆಕ್ಕ ಪರಿಶೋಧನಾಧಿಕಾರಿ
: ಶ್ರೀ ಶರಣಬಸಪ್ಪ ಆರ್.ಕೆ., ಲೆಕ್ಕ ಪರಿಶೋಧಕರು
: ಶ್ರೀ ಸಂಗಮೇಶ್ವರ, ಲೆಕ್ಕ ಪರಿಶೋಧಕರು
: ಶ್ರೀಮತಿ ಕವಿತಾ ಲೆಕ್ಕ ಪರಿಶೋಧಕರು

2) ಲೆಕ್ಕ ತನಿಖೆ ಪ್ರಾರಂಭಿಸಿದ ದಿನಾಂಕ : 02-01-2019

3) ಲೆಕ್ಕ ತನಿಖೆ ಮುಕ್ತಾಯದ ದಿನಾಂಕ : 31-01-2019

4) ಮಾನವ ದಿನಗಳು (92)

5) ಪರಿವೀಕ್ಷಣ ದಿನಾಂಕ : 25-4-2019

6) ಪರಿವೀಕ್ಷಣಾಧಿಕಾರಿಗಳು : ಶ್ರೀಮತಿ ಭಾರತಿ, ಜಂಟಿ ನಿರ್ದೇಶಕರು

ಕ) ಸದರಿ ಯೋಜನಾ ಪ್ರಾಧಿಕಾರವು 2012-13ನೇ ಸಾಲಿನಲ್ಲಿ ಜಾರಿಗೆ ಬರುವಂತೆ ಅಸ್ತಿತ್ವಕ್ಕೆ ಬಂದಿರುವುದರಿಂದ ಮತ್ತು ಹಿಂದೆ ಆಡಿಟ್ ಆಗದೇ ಇರುವುದರಿಂದ ಹಿಂದಿನ ಲೆಕ್ಕ ಪರಿಶೋಧನಾ ವರದಿಯ ವಸೂಲಾತಿ ಮತ್ತು ಆಕ್ಷೇಪಣೆ ಕಂಡಿಕೆಗಳು ಯಾವುದು ಇರುವುದಿಲ್ಲ.

| ಕ್ರ ಸಂ | ಭಾಗ | ಕಂಡಿಕೆ | ವಿವರ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| | | | ಯಾವುದು ಇರುವುದಿಲ್ಲ | | |

ಡ) ಪ್ರಸಕ್ತ ಸಾಲಿನ ಕಂಡಿಕೆಗಳ ಮಾಹಿತಿ:

| ಕ್ರ ಸಂ | ಭಾಗ | ಕಂಡಿಕೆ | ವಿವರ | ಆಕ್ಷೇಪಣೆ ಮೊತ್ತ | ವಸೂಲಾತಿ ಮೊತ್ತ |
|---|---|---|---|---|---|
| 1 | 2 | 5 | ಮೇ॥ ಸಿಎಡಿಎಂಇ ಬೆಂಗಳೂರು ಇವರಿಂದ ದಂಡ ವಸೂಲಾತಿ ಮಾಡುವ ಬಗ್ಗೆ | 0 | 42250 |
| 2 | 2 | 6 | ಆದಾಯ ತೆರಿಗೆ ಕಡಿತಗೊಳಿಸದೇ ಬಿಲ್ಲು ಪಾವತಿಸಿದ ಬಗ್ಗೆ | 0 | 67007 |
| 3 | 2 | 7 | ಡಿಡಿ (ಡಿಮೆಂಡ್ ಡ್ರಾಫ್ಟ್) ಗಳನ್ನು ನಿಯಮಬಾಹಿರವಾಗಿ ಏಜೆನ್ಸಿಗಳಿಗೆ ಮರುಪಾವತಿಸಿದ ಬಗ್ಗೆ | 0 | 40000 |
| 4 | 2 | 8 | ಕೆ.ಟಿ.ಪಿ.ಪಿ ಕಾಯ್ದೆ 1999 ಹಾಗೂ 2000 ಉಲ್ಲಂಘನೆ ಮಾಡಿದ ಬಗ್ಗೆ | 1303658 | 0 |
| 5 | 2 | 9 | ಕಛೇರಿ ಬಾಡಿಗೆ ನಿಯಮ ಮೀರಿ ಪಾವತಿಸಿದ ಬಗ್ಗೆ | 216000 | 0 |
| 6 | 2 | 10 | ಇ.ಎಸ್.ಐ ಮೊತ್ತವನ್ನು ಸಂದಾಯ ಮಾಡದೇ ಇರುವ ಬಗ್ಗೆ | 0 | 57065 |
| 7 | 2 | 12 | ಸ್ಲಂ ಸೆಸ್ ನ್ನು ಬೇರೆ ಖಾತೆಯಲ್ಲಿ ನಿರ್ವಹಿಸದೇ ಇರುವ ಬಗ್ಗೆ | 43203 | 0 |
| 8 | 2 | 14 | ಉತ್ತಮತೆ ಶುಲ್ಕ ಕಡಿಮೆ ವಸೂಲಿಸಿರುವ ಬಗ್ಗೆ | 1484113 | 0 |
| 9 | 2 | 15 | ಲೆಕ್ಕ ಪರಿಶೋಧನೆ ಶುಲ್ಕ ಕಡಿಮೆ ವಸೂಲಿಸಿರುವ ಬಗ್ಗೆ | 0 | 10000 |
| 10 | 2 | 16 | ವಿನ್ಯಾಸಗಳ ವಿವಿಧ ಶುಲ್ಕಗಳನ್ನು ಕಡಿಮೆ ವಸೂಲಿಸಿರುವ ಬಗ್ಗೆ | 0 | 15348 |
| 11 | 2 | 17 | ಕೆರೆಹೊಂಡ ಶುಲ್ಕ ವಸೂಲಿಸದಿರುವ ಬಗ್ಗೆ | 0 | 1000000 |
| 12 | 2 | 19 | ಬಿನಶೇತಕಿ ನೀಡುವಲ್ಲಿ ಕಡಿಮೆ ತಾಂತ್ರಿಕ ಶುಲ್ಕ ವಸೂಲಿಸಿರುವ ಬಗ್ಗೆ | 0 | 16000 |
| | | | ಒಟ್ಟು | **3046974** | **1247670** |

ಜಂಟಿ ನಿರ್ದೇಶಕರು
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,
ಕಲಬುರಗಿ

## ಭಾಗ-2

## ಪ್ರಸಕ್ತ ಸಾಲಿನ ಕಂಡಿಕೆಗಳ ಮಾಹಿತಿ

**1) ಆಯವ್ಯಯ:**

ಕರ್ನಾಟಕ ಟೌನ್ ಮತ್ತು ಕಂಟ್ರಿ ಪ್ಲಾನಿಂಗ್ ಕಾಯ್ದೆ 1961ರ ನಿಯಮ 22 ರ ಅನ್ವಯ ಜಮೆ ಮತ್ತು ಖರ್ಚುಗಳ ತಃಖ್ತೆ ತಯಾರಿಸಿ ಸಾಮಾನ್ಯ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದ ನಂತರ ವೆಚ್ಚ ಭರಿಸಬೇಕು. ಆದರೆ 2012-13 ರಿಂದ 2017-18ನೇ ಸಾಲಿನವರೆಗೆ ಆಯವ್ಯಯ ತಯಾರಿಸಿ ಅಧ್ಯಕ್ಷರಿಂದ ಅನುಮೋದನೆ ಪಡೆದು ವ್ಯವಹಾರ ನಡೆಸುತ್ತಿರುವುದು ಕಂಡುಬಂದಿರುವುದಿಲ್ಲ.

ಕಾರಣ, ಆಯವ್ಯಯ ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಪಡೆದು ವರದಿ ನೀಡಲು ಕೋರಲಾಗಿದೆ.

**2) ಆರ್ಥಿಕ ಪರಿಸ್ಥಿತಿ:**

ಪ್ರಸಕ್ತ ಸಾಲಿನ ಆರ್ಥಿಕ ಪರಿಸ್ಥಿತಿಯನ್ನು ಈ ಕೆಳಗಿನಂತಿದ್ದು,ವಿವರವನ್ನು ಅನುಬಂಧ-2ರಲ್ಲಿ ತೋರಿಸಲಾಗಿದೆ.

| ಆರಂಭಿಕ ಶಿಲ್ಕು | ಜಮೆ | ಒಟ್ಟು | ವೆಚ್ಚ | ಅಂತಿಮ ಶಿಲ್ಕು |
|---|---|---|---|---|
| 40750901 | 73470083 | 114220984 | 65093188 | 49127796 |

**3) ಪ್ರಾಧಿಕಾರದ ವಾರ್ಷಿಕ ವರದಿ ಸಲ್ಲಿಸದಿರುವ ಬಗ್ಗೆ:**

**ಕರ್ನಾಟಕ ನಗರ ಹಾಗೂ ಗ್ರಾಮಾಂತರ ಯೋಜನಾ ಕಾಯ್ದೆ** 1961ರ ಕಲಂ 68 ರನ್ವಯ ಪ್ರಾಧಿಕಾರ ಒಂದು ಆರ್ಥಿಕ ವರ್ಷದಲ್ಲಿ ಕೈಗೊಂಡ ಚಟುವಟಿಕೆಗಳ ವಿವರವಾದ ವಾರ್ಷಿಕ ವರದಿಯನ್ನು ನಗರಾಭಿವೃದ್ಧಿ ಇಲಾಖೆಗಲ್ಲಾದೆ ಇತರೆ ಸಂಬಂಧಿತ ಸೂಕ್ತ ಪ್ರಾಧಿಕಾರಗಳಿಗೆ ಸಲ್ಲಿಸಬೇಕು. ಆದರೆ 2012-13 ರಿಂದ 2017-18ನೇ ಸಾಲಿನವರೆಗೆ ಯಾವುದೇ ವಾರ್ಷಿಕ ವರದಿಯನ್ನು ತಯಾರಿಸಿರುವುದು ಕಂಡುಬಂದಿರುವುದಿಲ್ಲ.

ಕಾರಣ, ಆಯಾ ಸಾಲಿನ ಆರ್ಥಿಕ ವರ್ಷದಲ್ಲಿ ಪ್ರಾಧಿಕಾರವು ಮಂಜೂರಾತಿ ನೀಡಿದ ವಿನ್ಯಾಸ ಅನುಮೋದನೆ ವಿವರ ಕಟ್ಟಡದ ಪರವಾನಿಗೆ ಮಾಹಿತಿ, ಪ್ರಾಧಿಕಾರದ ಸಭೆಗಳ ಮಾಹಿತಿ ಸೇರಿದಂತೆ ಇನ್ನಿತರೆ ಆಡಳಿತಾತ್ಮಕ ಮತ್ತು ಆರ್ಥಿಕ ಚಟುವಟಿಕೆಗಳನ್ನು ಕೈಗೊಂಡ ಸಮಗ್ರವಾದ ವರದಿಯನ್ನು ಸರ್ಕಾರಕ್ಕೆ ಹಾಗೂ ಸಂಬಂಧಿಸಿದ ಇಲಾಖಾ ಕಛೇರಿಗೆಗಳಿಗೆ ಕಳುಹಿಸಲು ಕ್ರಮ ಜರುಗಿಸುವಂತೆ ಸೂಚಿಸಲಾಗಿದೆ.

4) ಮುದ್ದತ್ತು ಠೇವಣಿ ವಿವರ:

ನಗರ ಯೋಜನಾ ಪ್ರಾಧಿಕಾರ ಚಿತ್ತಾಪೂರ ಇವರು 2012-13 ರಿಂದ 2017-18ನೇ ಸಾಲಿನಲ್ಲಿ ಒಟ್ಟು ರೂ. 30000000=00 ಗಳನ್ನು ಮುದ್ದತ್ತು ಠೇವಣಿ ರೂಪದಲ್ಲಿ ಇಟ್ಟಿರುತ್ತಾರೆ. ವಿವರ ಈ ಕೆಳಗಿನಂತಿದೆ.

| ಕ್ರ ಸಂ | ಬ್ಯಾಂಕ್ ಹೆಸರು | ಠೇವಣಿ ಮೊತ್ತ | ಖಾತೆ ಸಂಖ್ಯೆ | ಠೇವಣಿ ಪಕ್ವಗೊಳ್ಳುವ ದಿನಾಂಕ |
|---|---|---|---|---|
| 1 | ಕೆನರಾ ಬ್ಯಾಂಕ್ | 5000000 | 1071302000072/1 | 26-09-2019 |
| 2 | -„- | 5000000 | 1071302000073/1 | -„- |
| 3 | -„- | 20000000 | 1071302000066/1 | 28-06-2019 |
| | ಒಟ್ಟು | **30000000** | | |

**5) ಮೇ॥ ಸಿಎಡಿಎಂಇ ಬೆಂಗಳೂರು ಇವರಿಂದ ದಂಡ ವಸೂಲಾತಿ ಮಾಡುವ ಬಗ್ಗೆ:**

ಚಿತ್ತಾಪುರ ನಗರ ಮಹಾ ಯೋಜನೆ ನಕ್ಷೆ ಗಣಕೀಕರಣಕ್ಕಾಗಿ ಟೆಂಡರ್ ಕರೆದಿದ್ದು, ಅದರಂತೆ ಸದರಿ ಕಾರ್ಯವನ್ನು ಮೇ॥ ಸಿಎಡಿಎಂಇ ಬೆಂಗಳೂರು ಇವರಿಗೆ ರೂ. 885000=00 ಗಳಿಗೆ ಗುತ್ತಿಗೆ ವಹಿಸಿಕೊಟ್ಟಿರುತ್ತಾರೆ. ಅದರಂತೆಯೇ ದಿನಾಂಕ: 26-4-2014 ರಂದು ಕರಾರು ಪತ್ರ ಮಾಡಿಕೊಂಡಿರುತ್ತಾರೆ. ಟೆಂಡರ್ ಕರಾರು ನಿಯಮ ಅಧ್ಯಾಯ-2 ಹಾಗೂ 3 ರ ಪ್ರಕಾರ ನಿಗಧಿತ ಅವಧಿಯೊಳಗೆ ಸದರಿ ಕಾರ್ಯವನ್ನು ನಿರ್ವಹಿಸದೇ ಇದ್ದಲ್ಲಿ, ಪ್ರತಿದಿನಕ್ಕೆ ರೂ. 50/- ರಂತೆ ಅಥವಾ ಶೇ.5% ರಂತೆ ದಂಡ ವಿಧಿಸಲು ಶರತ್ತು ಇರುತ್ತದೆ.

- ಕರಾರು ಮೊತ್ತ ರೂ. 885000=00
- ಕರಾರು ಪತ್ರ ದಿನಾಂಕ: 26-04-2014
- ಪೂರ್ಣಗೊಳಿಸಲು ನಿಗಧಿತ ಅವಧಿ: 225 ದಿನಗಳು

ದಿನಾಂಕ: 26-4-2014 ರಂದು ಕರಾರು ಪತ್ರ ಮಾಡಿಕೊಳ್ಳಲಾಗಿದ್ದು, ನಕ್ಷೆ ಗಣಕೀಕರಣ ಪೂರ್ಣಗೊಳಿಸಲು ನಿಗಧಿಪಡಿಸಿದ ಅವಧಿ 225 ದಿನಗಳಾಗಿದ್ದು, ಸದರಿ ಅವಧಿಯೂ ದಿನಾಂಕ: 6-12-2014 ರಂದು ಮುಕ್ತಾಯಗೊಳ್ಳುತ್ತದೆ. ಆದರೆ ಸದರಿ ನಕ್ಷೆ ಗಣಕೀಕರಣ ಕಾರ್ಯವನ್ನು ದಿನಾಂಕ: 31-3-2017 ರಂದು ಅಂದರೆ ಟೆಂಡರ್ ಅವಧಿ ಮುಗಿದ ಒಟ್ಟು 845 ದಿನಗಳು ಮೀರಿ ಪೂರ್ಣಗೊಳಿಸಿರುತ್ತಾರೆ. ಕಾರಣ, 845 ದಿನಗಳಿಗೆ ದಿನಕ್ಕೆ ರೂ. 50/- ರಂತೆ ಒಟ್ಟು ರೂ. 42250=00 ಗಳನ್ನು ದಂಡವಾಗಿ ಕರಾರು ಪತ್ರದ ಷರತ್ತುಗಳನ್ವಯ ಕಡಿತಗೊಳಿಸಬೇಕಾಗಿತ್ತು. ಆದರೆ ಸದರಿ ದಂಡವನ್ನು ಕಡಿತಗೊಳಿಸದೇ ಬಿಲ್ಲು ಪಾವತಿಸಿದ್ದು, ಇದು ಟೆಂಡರ್ ಷರತ್ತುಗಳಿಗೆ ವ್ಯತಿರಿಕ್ತವಾಗಿರುತ್ತದೆ. ಈ ಬಗ್ಗೆ ವಿಚಾರಣೆ ಪತ್ರ ಸಂಖ್ಯೆ: 9/9-1-2019 ರಂದು ವಿವರಣೆ ಕೇಳಲಾಗಿದ್ದು, ಸೂಕ್ತ ಸಮಜಾಯಿಸಿ ನೀಡಿರುವುದಿಲ್ಲ, ಕಾರಣ, ದಂಡದ ಮೊತ್ತ ರೂ. 42250=00 ಗಳನ್ನು ಸಂಬಂಧಿಸಿದ ಸಂಸ್ಥೆಯಾದ M/s CADME Bengaluru ವಸೂಲಿಸಲು ಸೂಚಿಸಲಾಗಿದೆ.

**6) ಆದಾಯ ತೆರಿಗೆ ಕಡಿತಗೊಳಿಸದೇ ಬಿಲ್ಲು ಪಾವತಿಸಿದ ಬಗ್ಗೆ:**

2012-13 ರಿಂದ 2017-18ನೇ ಸಾಲಿನ ಅವಧಿಯಲ್ಲಿ ನಗರ ಯೋಜನಾ ಪ್ರಾಧಿಕಾರ ಚಿತ್ತಾಪುರ ಇವರು ಕಛೇರಿ ಪೀಠೋಪಕರಣಗಳಿಗಾಗಿ ಹಾಗೂ ಚಿತ್ತಾಪುರ ನಗರದ ಮಹಾ ಯೋಜನೆಯ ಗಣಕೀಕರಣಕ್ಕಾಗಿ ವಿವಿಧ ಏಜೆನ್ಸಿಯವರಿಗೆ ಬಿಲ್ಲುಗಳನ್ನು ಸಂದಾಯ ಮಾಡಿರುತ್ತಾರೆ.

ಆದರೆ, ಆದಾಯ ತೆರಿಗೆ ನಿಯಮ 194(ಸಿ) ಹಾಗೂ 194 (ಜೆ) ಪ್ರಕಾರ ಶೇ.2% ಹಾಗೂ ಮತ್ತು ಶೇ.10% ರಂತೆ ಆದಾಯ ತೆರಿಗೆಯಾಗಿ ಕಡಿತಗೊಳಿಸಿ ಸಂಬಂಧಿಸಿದ ಲೆಕ್ಕ ಶಿರ್ಷಿಕೆಗೆ ತುಂಬಬೇಕಿರುತ್ತದೆ. ಆದರೆ ಸದರಿ ನಿಯಮಗಳ ವ್ಯತಿರಿಕ್ತವಾಗಿ ಆದಾಯ ತೆರಿಗೆ ಕಟಾಯಿಸದೇ ಬಿಲ್ಲುಗಳನ್ನು ಪಾವತಿಸಿದ್ದು, ವಿವರಗಳು ಈ ಕೆಳಗಿನಂತೆ ಇರುತ್ತವೆ.

| ಕ್ರ ಸಂ | ಏಜೆನ್ಸಿ ಹೆಸರು | ಒಟ್ಟು ಪಾವತಿಸಿದ ಮೊತ್ತ | ಶೇಕಡವಾರು ತೆರಿಗೆ | ಕಡಿತಗೊಳಿಸಬೇಕಾದ ಒಟ್ಟು ಮೊತ್ತ |
|---|---|---|---|---|
| 1 | M/s CADME Bengaluru | 619500 | 10% | 61950 |
| 2 | M/s Mudgal Bhimasenappa and Bros Chittapur | 252835 | 2% | 5057 |
| | | 872335 | | 67007 |

ಈ ಬಗ್ಗೆ ವಿಚಾರಣೆ ಪತ್ರ ಸಂಖ್ಯೆ: 7/9-1-2019 ಮತ್ತು ವಿಚಾರಣೆ ಪತ್ರ ಸಂಖ್ಯೆ: 10/16-1-2019 ರಂದು ನೀಡಿ ವಿವರಣೆ ಕೇಳಲಾಗಿರುತ್ತದೆಯಾದರೂ, ಯಾವುದೇ ಉತ್ತರ ನೀಡಿರುವುದಿಲ್ಲ. ಪ್ರಯುಕ್ತ ಮೇಲೆ ವಿವರಿಸಿದ ಮೊತ್ತ ರೂ. 67007=00 ಗಳನ್ನು ವಸೂಲಾತಿಸಿ ಸಂಬಂಧಿಸಿದ ಲೆಕ್ಕ ಶಿರ್ಷಿಕೆಗೆ ಜಮೆ ಮಾಡಲು ಸೂಚಿಸುತ್ತಾ ಹಾಗೂ ಇ-ಟಿಡಿಎಸ್ 26ಕ್ಯೂ ಕೂಡಾ ಆನ್-ಲೈನ್ ನಲ್ಲಿ ಅಪ್‌ಲೋಡ್ ಮಾಡಲು ಕೋರಲಾಗಿದೆ.

**7) ಡಿಡಿ (ಡಿಮೆಂಡ್ ಡ್ರಾಫ್ಟ್) ಗಳನ್ನು ನಿಯಮಬಾಹಿರವಾಗಿ ಏಜೆನ್ಸಿಗಳಿಗೆ ಮರುಪಾವತಿಸಿದ ಬಗ್ಗೆ:**

ಚಿತ್ತಾಪುರ ನಗರ ಮಹಾ ಯೋಜನೆಯ ಗಣಕೀಕರಣ ಕಾರ್ಯಕ್ಕೆ ಟೆಂಡರನ್ನು ಕರೆದಿರುತ್ತಾರೆ. ಸದರಿ ಟೆಂಡರ್ ಗೆ ಮೂರು ಏಜೆನ್ಸಿಗಳು ಟೆಂಡರ್ ಫಾರಂ ಬೆಲೆ ರೂ. 5000*3=15000/- ಡಿಡಿ ರೂಪದಲ್ಲಿ ಸ್ವೀಕರಿಸಿರುತ್ತಾರೆ. ವಿವರ ಈ ಕೆಳಗಿನಂತೆ ಇರುತ್ತದೆ.

- ಡಿಡಿ ಸಂಖ್ಯೆ: 613410/13-12-2013 ರೂ. 5000=00
- ಡಿಡಿ ಸಂಖ್ಯೆ: 613411/13-12-2013 ರೂ. 5000=00
- ಡಿಡಿ ಸಂಖ್ಯೆ: 613412/13-12-2013 ರೂ. 5000=00

ಸದರಿ ಟೆಂಡರ್ ಫಾರಂಗಳ ಬೆಲೆಯನ್ನು ಹಿಂತಿರುಗಿಸಲು ಅವಕಾಶವಿರುವುದಿಲ್ಲ. ಆದರೂ ಸಹ ಡಿಡಿ ಗಳನ್ನು ಪುನಃ ಟೆಂಡರದಾರರಿಗೆ ಮರಳಿಸಿರುತ್ತಾರೆ. " ಹಾಗೂ M/s CADME Bengaluru ಇವರು ಭದ್ರತಾ ಠೇವಣಿಯಾಗಿ (ಇ.ಎಂ.ಡಿ) ರೂ. 25000=00 ನೀಡಿದ್ದು, ಸದರಿ ಮೊತ್ತವನ್ನು ಸಹ ಹಿಂತಿರುಗಿಸಿರುತ್ತಾರೆ. ಈ ಬಗ್ಗೆ ವಿಚಾರಣೆ ಪತ್ರ ಸಂಖ್ಯೆ: 9/9-1-2019 ರಲ್ಲಿ ಸಮಜಾಯಿಸಿ ಕೇಳಲಾಗಿದ್ದು, ಯಾವುದೇ ಉತ್ತರ ನೀಡಿರುವುದಿಲ್ಲ. ಆದ್ದರಿಂದ ಈ ಮೇಲೆ ವಿವರಿಸಿದ ಮೊತ್ತ ರೂ. 40000=00 ಗಳನ್ನು ಸಂಬಧಿಸಿದ ಏಜೆನ್ಸಿಗಳಿಂದ ವಸೂಲಿಸಿ, ಪ್ರಾಧಿಕಾರದ ನಿಧಿಗೆ ಜಮೆ ತೆಗೆದುಕೊಳ್ಳಲು ಕೋರಲಾಗಿದೆ.

8) ಕೆ.ಟಿ.ಪಿ.ಪಿ ಕಾಯ್ದೆ 1999 ಹಾಗೂ 2000 ಉಲ್ಲಂಘನೆ ಮಾಡಿದ ಬಗ್ಗೆ:

ಚಿತ್ತಾಪೂರ ನಗರ ಯೋಜನಾ ಪ್ರಾಧಿಕಾರ ದಿನಾಂಕ: 12-03-2012 ರಲ್ಲಿ ಹೊಸದಾಗಿ ಸೃಜನೆಯನ್ನು ಮಾಡಿ ಸರಕಾರವು ಆದೇಶವನ್ನು ಹೊರಡಿಸಿರುತ್ತದೆ. ಅದರಂತೆ ಕಛೇರಿಯ ಕೆಲಸಕ್ಕಾಗಿ ಸಿಬ್ಬಂದಿಯ ನೇಮಕ ಹಾಗೂ ಕಛೇರಿ ಉಪಯೋಗಕ್ಕಾಗಿ ಪಿಠೋಪಕರಣಗಳನ್ನು ಖರೀದಿಸಲು ಟೆಂಡರನ್ನು ಕರೆಯದೇ ನೇರವಾಗಿ ಕೊಟೇಶನ್ ಆಧಾರದ ಮೇಲೆ ಕಾರ್ಯವನ್ನು ನಿರ್ವಹಿಸಿರುತ್ತಾರೆ. ಆದರೆ ಕೆ.ಟಿ.ಪಿ. ಕಾಯ್ದೆ ಪ್ರಕಾರ ರೂ. 1.00 ಲಕ್ಷಗಳಿಂತ ಹೆಚ್ಚಿನ ಮೊತ್ತ ಇದ್ದಲ್ಲಿ ಟೆಂಡರ ಕರೆಯಬೇಕಾಗಿರುತ್ತದೆ. ಇಲ್ಲಿ ನಿಯಮ ಉಲ್ಲಂಘನೆಯಾಗಿರುತ್ತದೆ. ವಿವರಗಳು ಈ ಕೆಳಗಿನಂತಿವೆ.

| ಕ್ರ ಸಂ | ಏಜೆನ್ಸಿ ಹೆಸರು | ಖರೀದಿ ಉದ್ದೇಶ | ಪಾವತಿಸಿದ ಮೊತ್ತ |
|---|---|---|---|
| 1 | M\s Industrial Security Service Kalaburagi | ಹೊರಮೂಲ ಸಿಬ್ಬಂದಿ ನೇಮಕ | 877924 |
| 2 | M\s Mudgal Bhimashappa & Bro's Chittapur | ಪಿಠೋಕರಣ ಖರೀದಿ | 162835 |
| 3 | -,,- | -,,- | 90000 |
| 4 | Disha Enterprises Chittapur | -,,- | 35000 |
| 5 | Shree Vishwakarma Furniture | -,,- | 57600 |
| 6 | Jajee Electricals | -,,- | 60899 |
| 7 | -,,- | -,,- | 19400 |
| | | ಒಟ್ಟು | 1303658 |

ರೂ. 1303658=00 ಗಳಲ್ಲಿ ಹೊರಮೂಲ ಮಾನವ ಸಂಪನ್ಮೂಲ ಪಡೆಯುವುದು ಮತ್ತು ಖರೀದಿಗಾಗಿ ಕೆ.ಟಿ.ಪಿ.ಪಿ ಕಾಯ್ದೆ ಉಲ್ಲಂಘನೆಯಾಗಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ. ಇದರ ಬಗ್ಗೆ ವಿಚಾರಣಾ ಪತ್ರ ಸಂಖ್ಯೆ: 2/8-1-2019 ಹಾಗೂ 6/9-1-2019 ರಂದು ವಿಚಾರಣೆ ಪತ್ರ ನೀಡಿ ಸಮಜಾಯಿಸಿ ನೀಡುವಂತೆ ಕೋರಲಾಗಿರುತ್ತದೆ. ಆದರೆ ಯಾವುದೇ ಮಾಹಿತಿ ನೀಡಿರುವುದಿಲ್ಲ. ಆದ್ದರಿಂದ ಸದರಿ ಮೊತ್ತ ರೂ. 1303658=00 ಗಳನ್ನು ಆಕ್ಷೇಪಣೆಯಲ್ಲಿಡಲಾಗಿದೆ. ಹಾಗೂ ಸದರಿ ಕಾರ್ಯಾಲಯದಲ್ಲಿ ಉಗ್ರಾಣ ದಾಸ್ತಾನು ವಹಿಯನ್ನು ನಿರ್ವಹಿಸಿರುವುದಿಲ್ಲ ಮತ್ತು ಖರೀದಿಸಿದ ಸಾಮಗ್ರಿಗಳನ್ನು ಸ್ಟಾಕ್ ರಜಿಸ್ಟರಿಗೆ ತೆಗೆದುಕೊಂಡಿರುವುದಿಲ್ಲ ಇದು ಎಂ.ಸಿ.ಇ ನಿಯಮವನ್ನು ಉಲ್ಲಂಘನೆಯಾಗಿರುತ್ತದೆ. ಆದ್ದರಿಂದ ಮುಂದಿನ ದಿನಗಳಲ್ಲಿ ನಿಯಮಾನುಸಾರ ಸ್ಟಾಕ್ ರಜಿಸ್ಟರನ್ನು ನಿರ್ವಹಿಸಲು ಸೂಚಿಸಲಾಗಿದೆ.

9) ಕಛೇರಿ ಬಾಡಿಗೆ ನಿಯಮ ಮೀರಿ ಪಾವತಿಸಿದ ಬಗ್ಗೆ:

ನಗರ ಯೋಜನಾ ಪ್ರಾಧಿಕಾರ ಚಿತ್ತಾಪುರ ಕಛೇರಿಯು 12-03-2012 ರಿಂದ ಹೊಸದಾಗಿ ಸರಕಾರದ ಆದೇಶದ ಪ್ರಕಾರ ಸೃಜನೆಯಾಗಿರುತ್ತದೆ. " ಹಾಗೂ ಕಛೇರಿ ದಿನಾಂಕ: 26-4-2012 ರಂದು ಪ್ರಾರಂಭವಾಗಿರುತ್ತದೆ." ಸದರಿ ಕಛೇರಿಯು ಸ್ವಂತ ಕಟ್ಟಡವನ್ನು ಹೊಂದಿರುವುದಿಲ್ಲ. ಆದ್ದರಿಂದ ಬಾಡಿಗೆ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಪ್ರತಿ ತಿಂಗಳಿಗೆ ರೂ. 8000=00 ದಂತೆ ಬಾಡಿಗೆಯನ್ನು ಮೇ॥ ಬಜಾಜ್ ಬಿಲ್ಡರ್ಸ್ & ಡೆವಲಪರ್ಸ್ ಚಿತ್ತಾಪುರ ಇವರಿಗೆ ಪಾವತಿಸಿರುತ್ತಾರೆ. ಆದರೆ ಬಾಡಿಗೆ ಮೊತ್ತವು ಲೋಕೋಪಯೋಗಿ ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ ಪರಿವೀಕ್ಷಣೆಗೊಂಡು ಅನುಮೋದನೆಗೊಂಡಿರುವುದಿಲ್ಲ. ಇದರ ಬಗ್ಗೆ ವಿಚಾರಣೆ ಪತ್ರ ಸಂಖ್ಯೆ: 4/8-1-2019 ರ ಪ್ರಕಾರ ನೀಡಲಾಗಿರುತ್ತದೆ. ಆದ್ದರಿಂದ ಸದರಿ ಪಾವತಿಸಲಾದ ಮೊತ್ತ ರೂ. 216000=00 ಬಾಡಿಗೆ ಪಾವತಿಸಿದ ಮೊತ್ತವನ್ನು ಲೋಕೋಪಯೋಗಿ ಇಲಾಖೆಯ ಸಕ್ಷಮ ಪ್ರಾಧಿಕಾರದಿಂದ ಮಂಜೂರಾತಿ ಪಡೆದು ಅನುಪಾಲನಾ ವರದಿ ಸಲ್ಲಿಸುವವರೆಗೆ ಆಕ್ಷೇಪಣೆಯಲ್ಲಿಡಲಾಗಿದೆ.

10) ಇ.ಎಸ್.ಐ ಮೊತ್ತವನ್ನು ಸಂದಾಯ ಮಾಡದೇ ಇರುವ ಬಗ್ಗೆ:

ನಗರ ಯೋಜನಾ ಪ್ರಾಧಿಕಾರ ಚಿತ್ತಾಪುರ ಇಲ್ಲಿ ಹೊರಮೂಲ ಸಂಸ್ಥೆಯಿಂದ ಸಿಬ್ಬಂದಿಗಳ ಮಾನವ ಸಂಪನ್ಮೂಲ ಪಡೆದು ಕಛೇರಿಯ ಕಾರ್ಯನಿರ್ವಹಣೆ ಮಾಡಲಾಗಿರುತ್ತದೆ. ಸದರಿ ಸಿಬ್ಬಂದಿಯವರ ವೇತನದಿಂದ ಹಾಗೂ ಏಜೆನ್ಸಿಯವರಿಂದ ಶೇ.6.5 ರಷ್ಟು ಮೊತ್ತವನ್ನು ಇ.ಎಸ್.ಐ ವಂತಿಕೆಯಾಗಿ ಕಟಾಯಿಸಿ ಕಾರ್ಮಿಕರ ರಾಜ್ಯ ವಿಮಾ ಇಲಾಖೆಗೆ ಪ್ರತಿ ತಿಂಗಳು ಜಮೆ ಮಾಡಬೇಕಾಗುತ್ತದೆ. ಆದರೆ ಈ ರೀತಿ ಕ್ರಮ ಕೈಗೊಂಡಿರುವುದಿಲ್ಲ. ಈ ಬಗ್ಗೆ ವಿಚಾರಣೆ ಪತ್ರ ಸಂಖ್ಯೆ: 3/8-1-2019 ರಂದು ವಿವರಣೆ ಕೇಳಲಾಗಿತ್ತು. ಆದರೆ ಸೂಕ್ತ ಸಮಜಾಯಿಸಿ ನೀಡಿರುವುದಿಲ್ಲ.

ಆದ್ದರಿಂದ M\s Industrial Security Service Kalaburagi ಇವರಿಗೆ ಪಾವತಿಸಿದ ಒಟ್ಟು ಮೊತ್ತವಾದ ರೂ. 877924=00 ಗಳಿಗೆ ಶೇ.6.5% ರಂತೆ ಕಡಿತಗೊಳಿಸಬೇಕಾದ ಮೊತ್ತ ರೂ. 57065=00 ಗಳನ್ನು ಸದರಿ ಮಾನವ ಸಂಪನ್ಮೂಲ ಸರಬರಾಜು ಸಂಸ್ಥೆಯವರಿಂದ ವಸೂಲಿಸಿ ಸಂಬಂಧಿಸಿದ ಇಲಾಖೆಗೆ ಜಮೆ ಮಾಡಲು ಸೂಚಿಸಲಾಗಿದೆ.

**11) ನಗದು ಪುಸ್ತಕ ಕ್ರಮಬದ್ಧವಾಗಿ ನಿರ್ವಹಿಸದೇ ಇರುವ ಬಗ್ಗೆ:**

2012-13 ರಿಂದ 2017-18ರ ವರೆಗಿನ ನಗದು ಪುಸ್ತಕವನ್ನು ಪರಿಶೀಲಿಸಲಾಗಿ, ಸ್ವೀಕೃತಿಗಳನ್ನು ನಗದು ಪುಸ್ತಕದಲ್ಲಿ ಜಮೆ ಮಾಡಿಕೊಂಡಿರುವುದಿಲ್ಲ; ಕೇವಲ ಖರ್ಚುಗಳನ್ನು ಮಾತ್ರ ನಮೂದಿಸಿರುತ್ತಾರೆ. ಇದು ಕೆ.ಎಫ್.ಸಿ-328 ಮತ್ತು 329ರ ನಿಯಮಗಳ ಸ್ಪಷ್ಟ ಉಲ್ಲಂಘನೆಯಾಗಿರುತ್ತದೆ. ಈ ಬಗ್ಗೆ ವಿಚಾರಣೆ ಪತ್ರ ಸಂಖ್ಯೆ: 5/9-1-2019 ರಂದು ವಿವರಣೆ ಕೇಳಲಾಗಿದ್ದು, ಯಾವುದೇ ಲಿಖಿತ ಸಮಜಾಯಿಸಿ ನೀಡಿರುವುದಿಲ್ಲ. ಆದರೆ ಮೌಖಿಕವಾಗಿ ತಮ್ಮ ಕಛೇರಿಯಲ್ಲಿ ಮಂಜೂರಾತಿ ಹುದ್ದೆಗಳು ಖಾಲಿ ಇರುವುದರಿಂದ ಮತ್ತು ಲಿಪಿಕ ನೌಕರರ ಸೇವೆ ಲಭ್ಯವಿಲ್ಲದಿರುವುದರಿಂದ ಸೂಕ್ತ ರೀತಿಯಲ್ಲಿ ನಗದು ಪುಸ್ತಕವನ್ನು ನಿರ್ವಹಿಸುವುದು ಸಾಧ್ಯವಾಗಿರುವುದಿಲ್ಲವೆಂದು ಮಾಹಿತಿ ನೀಡಿರುತ್ತಾರೆ. ಈ ಲೋಪದೋಷವನ್ನು ಸರಿಪಡಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

**12) ಸ್ಲಂ ಸೆಸ್ ನ್ನು ಬೇರೆ ಖಾತೆಯಲ್ಲಿ ನಿರ್ವಹಿಸದೇ ಇರುವ ಬಗ್ಗೆ:**

ನಗರ ಯೋಜನಾ ಪ್ರಾಧಿಕಾರ ಚಿತ್ತಾಪೂರಿನ 2012-13 ರಿಂದ 2017-18ನೇ ಸಾಲಿನವರೆಗೆ ಲೆಕ್ಕ ಪರಿಶೋಧನೆಯನ್ನು ಕೈಗೊಂಡಿದ್ದು, ಸದರಿ ಸಮಯದಲ್ಲಿ ವಿನ್ಯಾಸಗಳಿಗೆ ಸ್ಲಂ ಸೆಸ್ ನ್ನು ಕಡಿತಗೊಳಿಸಿದ್ದು ರೂ. 43203=00 ನ್ನು ಇರುತ್ತದೆ. ಸದರಿ ಮೊತ್ತವನ್ನು ಬೇರೆ ಖಾತೆಯಲ್ಲಿ ನಿರ್ವಹಿಸಿರುವುದಕ್ಕೆ ವಿಚಾರಣೆ ಪತ್ರ ಸಂಖ್ಯೆ: 18/30-1-2019 ರಂದು ವಿವರಣೆ ನೀಡಲು ಕೋರಲಾಗಿತ್ತು. ಆದರೆ ಸದರಿ ವಿಷಯದ ಬಗ್ಗೆ ಯಾವುದೆ ವಿವರಣೆ ನೀಡದಿರುವ ಪ್ರಯುಕ್ತ ಸ್ಲಂ ಸೆಸ್ ಮೊತ್ತ ರೂ. 43203=00 ನ್ನು ಆಕ್ಷೇಪಣೆಯಲ್ಲಿಡಲಾಗಿದೆ.

**13) ಕೈಗಾರಿಕೆಗಾಗಿ ನೀಡಿರುವ ವಿನ್ಯಾಸವು ವಾಣಿಜ್ಯಕ್ಕೆ ನೀಡಿರುವ ಬಗ್ಗೆ:**

ಲೆಕ್ಕ ಪರಿಶೋಧನೆ ಸಮಯದಲ್ಲಿ ಸರ್ವೇ ನಂ. 534/2 ಶ್ರೀ ಮಹಾದೇವ ತಂದೆ ಬಸಣ್ಣ ಪೂಜಾರಿ ಇವರಿಗೆ ಕೈಗಾರಿಕೆಗಾಗಿ ಬಿನಶೆತಕಿಗಾಗಿ ಪರಿವರ್ತನೆಯನ್ನು ಮಾನ್ಯ ಜಿಲ್ಲಾಧಿಕಾರಿಗಳು ಮಂಜೂರು ಮಾಡಿರುತ್ತಾರೆ. ಹಾಗೂ ಯಾವ ಉದ್ದೇಶಕ್ಕಾಗಿ ಮಂಜೂರು ನೀಡಲಾಗಿರುತ್ತದೆಯೋ ಆ ಉದ್ದೇಶಕ್ಕಾಗಿಯೇ ಉಪಯೋಗಿಸಲು ಷರತ್ತು ಮತ್ತು ನಿಬಂಧನೆಯನ್ನು ಕೂಡಾ ಒಳಪಟ್ಟಿರುತ್ತದೆ. ಆದರೆ ಸದರಿ ಜಮೀನನ್ನು ಕೈಗಾರಿಕೆ ಉದ್ದೇಶಕ್ಕಾಗಿ " ಬಿನಶೆತಕಿ" ನೀಡುವ ಬದಲು ವಾಣಿಜ್ಯ ಕಲ್ಯಾಣ ಮಂಟಪ ಉದ್ದೇಶಕ್ಕಾಗಿ ಅನುಮೋದನೆ ನೀಡಿರುವುದು ಆಡಿಟ್ ಗಮನಿಸಲಾಗಿದೆ. ಇದರ ಬಗ್ಗೆ ವಿಚಾರಣೆ ಪತ್ರ ಸಂಖ್ಯೆ: 17/17-1-2019 ರಂದು ಸ್ಪಷ್ಟೀಕರಣ ನೀಡಲು ಕೋರಲಾಗಿತ್ತು. ಆದರೆ ಯಾವುದೇ ವಿವರಣೆ ನೀಡದೇ ಇರುವ ಪ್ರಯುಕ್ತ ಸದರಿ ವಿಷಯದ ಬಗ್ಗೆ ಸ್ಪಷ್ಟ ನಿಲುವು ಆಗುವವರೆಗೂ ನೀಡಿರುವ ವಿನ್ಯಾಸವು ಆಕ್ಷೇಪಣೆಯಲ್ಲಿಡಲಾಗಿದೆ.

**14) ಉತ್ತಮತೆ ಶುಲ್ಕ ಕಡಿಮೆ ವಸೂಲಿಸಿರುವ ಬಗ್ಗೆ:**

**ಲೆಕ್ಕ ಪರಿಶೋಧನೆ ಸಮಯದಲ್ಲಿ ವಿನ್ಯಾಸಗಳ ಕಡತಗಳನ್ನು ಪರಿಶೀಲಿಸುತ್ತಿರುವ ಸಮಯದಲ್ಲಿ ದಿನಾಂಕ: 18-08-2015 ರಂದು ಶ್ರೀ ಪಿ.ಕೆ. ಸಿಂಗಾನಿಯಾ, ಸಿನಿಯರ್, ವೈಸ್-ಪ್ರೆಸಿಡೆಂಟ್ (ವರ್ಕ್ಸ್) ಮೆ॥ ಓರಿಯಂಟಲ್ ಸಿಮೆಂಟ್ ಫ್ಯಾಕ್ಟರಿ** ಕಂ. ಲಿಮಿಟೆಡ್ ಇವರಿಗೆ ವಿನ್ಯಾಸ ಅನುಮೋದನೆಯನ್ನು ನೀಡಿರುತ್ತೀರಿ. ಆದರೆ ವಿನ್ಯಾಸ ನೀಡುವಾಗ ನಿಗಧಿಪಡಿಸಿದ ಶುಲ್ಕಗಳಲ್ಲಿ ಒಂದಾದ ಉತ್ತಮತೆ ಶುಲ್ಕವು ಪ್ರತಿ ಚದರು ಮೀಟರ್ ಗೆ ರೂ. 4/- ರಂತೆ ನೀಡಲು ತಮ್ಮ ಸಭೆಯ ನಡುವಳಿ ದಿನಾಂಕ: 27-07-2012 ರಲ್ಲಿ ದರವನ್ನು ನಿಗದಿಪಡಿಸಿರುತ್ತೀರಿ. ಅದರಂತೆ ತಾವು ಕೂಡಾ ಲೆಕ್ಕ ಪರಿಶೋಧನೆ ಶುಲ್ಕ ನಿಗದಿಪಡಿಸಿದ ದರಕ್ಕೆ ವಸೂಲಿಸಿದ್ದು, ಆಡಿಟ್ ಗಮನಿಸಿದೆ. ಆದರೆ ಉತ್ತಮತೆ ಶುಲ್ಕವು ಪ್ರತಿ ಚ.ಮಿ. ರೂ. 4/- ರ ಬದಲಾಗಿ ಚ.ಮಿ. ಗೆ ರೂ. 2.50/- ರಂತೆ ಪಡೆದಿದ್ದು, ಆಡಿಟ್ ಗಮನಿಸಿದೆ. ಇದರ ಬಗ್ಗೆ ವಿಚಾರಣಾ ಪತ್ರ ಸಂಖ್ಯೆ: 16/17-1-2019 ರಂದು ಒಟ್ಟು 243.33 ಎಕರೆಗೆ ಚ.ಮೀ. 984721.57 ಆಗುತ್ತದೆ. ಚ.ಮೀ. ರೂ. 4/- ರಂತೆ 3938886=00 ಉತ್ತಮತೆ ಶುಲ್ಕ ಎದುರಾಗಿ ತಾವು ರೂ. 2466910=00 ಶುಲ್ಕವನ್ನು ಮಾತ್ರ ವಸೂಲಿಸಿರುತ್ತೀರಿ. ಆದರೆ ರೂ. 1471976=00 ವ್ಯತ್ಯಾಸವು ಆಗಿರುವುದಕ್ಕೆ ವಿವರಣೆ ನೀಡಲು ಕೋರಲಾಗಿತ್ತು. ಆದರೆ ಯಾವುದೇ ವಿವರಣೆಯನ್ನು ನೀಡದೇ ಇರುವ ಪ್ರಯುಕ್ತ ಸದರಿ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ.

ಮುಂದುವರೆದು, ಕಾರ್ಯದರ್ಶಿಗಳು, ತಾಲೂಕ ಕುರಿ ಸಂಗೋಪನಾ ಮತ್ತು ಉಣ್ಣೆ ಉತ್ಪಾದಕ ಸಹಕಾರಿ ಸಂಘ ಚಿತ್ತಾಪುರ ಸರ್ವೇ ನಂ. 535 ಇದರ ಉತ್ತಮತೆ ಶುಲ್ಕವು ಪ್ರ.ಚ.ಮೀ ರೂ. 4/- ರಂತೆ ಒಟ್ಟು 8093 ಚ.ಮಿ. ಗೆ ರೂ. 32372=00 ಆಗುತ್ತದೆ. ಆದರೆ ತಾವು ವಸೂಲಿಸಿದ್ದು, ರೂ. 20235=00 ಇನ್ನು ವ್ಯತ್ಯಾಸ ಮೊತ್ತ ರೂ. 12137=00 ಕಡಿಮೆ ವಸೂಲಿಸಿರುವುದಕ್ಕೆ ವಿಚಾರಣೆ ಪತ್ರ ಸಂಖ್ಯೆ: 13/17-1-2019 ರಂದು ವಿವರಣೆ ನೀಡಲು ಕೋರಲಾಗಿತ್ತು. ಆದರೆ ಯಾವುದೇ ವಿವರಣೆ ನೀಡಿರುವ ಪ್ರಯುಕ್ತ ಸದರಿ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ.

15) ಲೆಕ್ಕ ಪರಿಶೋಧನೆ ಶುಲ್ಕ ಕಡಿಮೆ ವಸೂಲಿಸಿರುವ ಬಗ್ಗೆ:

ಸದರಿ ಸಂಸ್ಥೆಯು ವಿನ್ಯಾಸಗಳ ಲೆಕ್ಕ ಪರಿಶೋಧನೆ ಶುಲ್ಕವನ್ನು ಪ್ರತಿ ಎಕರೆಗೆ ರೂ. 1000=00 ದಂತೆ ನಿಗದಿಪಡಿಸಿದ್ದು, ಅದರಂತೆ ಕಡತಗಳು ಪರಿಶೀಲಿಸಿದಾಗ ಶ್ರೀ ಮಹ್ಮದ್ ಸಾಜೀದ್ ಅಲಿ, ಸರ್ವೇ ನಂ. 121/5 2.02 ಎಕರೆ ಲೆಕ್ಕ ಪರಿಶೋಧನೆ ಶುಲ್ಕ ರೂ. 2000=00, ಶ್ರೀಮತಿ ಸುಶೀಲಾಬಾಯಿ ಸರ್ವೇ ನಂ. 124/2, 124/8 ಇವರ ಲೆಕ್ಕ ಪರಿಶೋಧನಾ ಶುಲ್ಕ ರೂ. 5000=00 ಮತ್ತು ಶ್ರಿ ದಯಾನಂದ ಸರ್ವೇ ನಂ. 124/4 3.03 ಎಕರೆ ಇವರ ಲೆಕ್ಕ ಪರಿಶೋಧನ ಶುಲ್ಕ ರೂ. 3000=00 ಹೀಗೆ ಒಟ್ಟು ರೂ. 10000=00 ಗಳು ವಸೂಲಿಸಿರುವುದಕ್ಕೆ ವಿಚಾರಣೆ ಪತ್ರ ಸಂಖ್ಯೆ: 15/17-1-2019 ರಂದು ವಿವರಣೆ ನೀಡಲು ಕೋರಲಾಗಿತ್ತು. ಸದರಿ ವಿಷಯದ ಬಗ್ಗೆ ಯಾವುದೇ ವಿವರಣೆ ನೀಡದೇ ಇರುವ ಪ್ರಯುಕ್ತ ಸದರಿ ಮೊತ್ತವನ್ನು ಆಕ್ಷೇಪಣೆಯಲ್ಲಿಡಲಾಗಿದೆ.

16) ವಿನ್ಯಾಸಗಳ ವಿವಿಧ ಶುಲ್ಕಗಳನ್ನು ಕಡಿಮೆ ವಸೂಲಿಸಿರುವ ಬಗ್ಗೆ:

ಶ್ರೀ ವಿಜಯಕುಮಾರ ತಂದೆ ಮಲ್ಲಾರೆಡ್ಡಿ ದೇಶಮುಖ್ ಸರ್ವೇ ನಂ. 1/5/6/7 ರಲ್ಲಿ ಒಟ್ಟು 20.03 ಎಕರೆಗೆ ವಸತಿ ವಿನ್ಯಾಸಕ್ಕಾಗಿ ಅನುಮೋದನೆ ಪಡೆದಿದ್ದು, ಆದರೆ ನಿಗದಿಪಡಿಸಿದ ಶುಲ್ಕಕ್ಕಿಂತ ಕಡಿಮೆ ಪಡೆದಿರುವುದು ಆಡಿಟ್ ಗಮನಿಸಲಾಗಿದ್ದು, ಇದರ ಬಗ್ಗೆ ವಿಚಾರಣಾ ಪತ್ರ ಸಂಖ್ಯೆ: 14/17-1-2019 ರಂದು ವಿವರಣೆ ನೀಡಲು ಕೋರಲಾಗಿತ್ತು. ಆದರೆ ಯಾವುದೇ ವಿವರಣೆಯನ್ನು ನೀಡಿರುವುದಿಲ್ಲ. ಪ್ರಯುಕ್ತ ಸದರಿ ಮೊತ್ತ ರೂ. 15348=00 ವನ್ನು ವಸೂಲಾತಿಯಲ್ಲಿ ಇಡಲಾಗಿದೆ. ವಿವರ ಈ ಕೆಳಗಿನಂತಿದೆ.

| ಕ್ರ ಸಂ | ವಿವರ | | ಲೆಕ್ಕ ಪರಿಶೋಧನೆ ಶುಲ್ಕ | ಉತ್ತಮತೆ ಶುಲ್ಕ | ಒಟ್ಟು |
|---|---|---|---|---|---|
| 1 | ವಸೂಲಿಸಬೇಕಾದ ಮೊತ್ತ | ವಾಣಿಜ್ಯ 1.30 | 4000 | 21040 | |
| | | ವಸತಿ 19.40 | 19000 | 115578 | |
| | | ಒಟ್ಟು | **23000** | **136618** | |
| 2 | ವಸೂಲಿಸಿದ ಮೊತ್ತ | | 0 | 144270 | |
| 3 | ವ್ಯತ್ಯಾಸ | | 23000 | –7652 | 15348 |

17) ಕೆರೆಹೊಂಡ ಶುಲ್ಕ ವಸೂಲಿಸದಿರುವ ಬಗ್ಗೆ:

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಸನ 2011 ಬೆಂಗಳೂರು ದಿನಾಂಕ: 03-01-2012 ರ ಪ್ರಕಾರ ಪ್ರತಿ ಎಕರೆಗೆ ರೂ. 1.00 ಲಕ್ಷದಂತೆ ಶುಲ್ಕವನ್ನು ವಿಧಿಸಲು ಕಾಯ್ದೆ ಜಾರಿಗೆ ಬಂದಿರುವ ಪ್ರಯುಕ್ತ ಲೆಕ್ಕ ಪರಿಶೋಧನೆಯಲ್ಲಿ ವಿನ್ಯಾಸಗಳ ಕಡತಗಳನ್ನು ಪರಿಶೀಲಿಸಲಾಗಿ ನಿಗದಿಪಡಿಸಿದ ಕೆರೆಹೊಂಡ ಶುಲ್ಕಕ್ಕಿಂತ ಕಡಿಮೆ ವಸೂಲಿಸಿದ್ದು, ಆಡಿಟ್ ಗಮನಿಸಲಾಗಿದೆ. ವಿವಿಧ ವಿನ್ಯಾಸಗಳಿಗೆ ಕೆರೆ ಪುನರ್ ಜೀವನ ಶುಲ್ಕ ಕಡಿಮೆ ವಸೂಲಿಸಿರುವುದಕ್ಕೆ ವಿಚಾರಣೆ ಪತ್ರ ಸಂಖ್ಯೆ: 12/17-1-2019 ರಂದು ವಿವರಣೆ ನೀಡಲು ಕೋರಲಾಗಿತ್ತು. ಆದರೆ ಇದಕ್ಕೆ ಯಾವುದೇ ವಿವರಣೆ ನೀಡಿರುವುದಿಲ್ಲ. ವಿನ್ಯಾಸಗಳ ವಿವರಣೆ ಈ ಕೆಳಗಿನಂತಿದೆ.

| ಕ್ರ ಸಂ | ವಿವರ | ನಿಗದಿಪಡಿಸಿದ ಕೆರೆಹೊಂಡ ಶುಲ್ಕ | ವಸೂಲಿಸಿದ ಕೆರೆಹೊಂಡ ಶುಲ್ಕ | ಬಾಕಿ |
|---|---|---|---|---|
| 1 | ಶ್ರೀ ಶೇಖ್ ಅಬ್ದುಲ, ಸರ್ವೇ ನಂ. 715, 1 ಎಕರೆ | 100000 | 0 | 100000 |
| 2 | ಶ್ರೀ ಮಹ್ಮದ್ ಯೂಸುಫ್, 714, 1 ಎಕರೆ | 100000 | 0 | 100000 |
| 3 | ಶ್ರಿಮತಿ ಪ್ರೇಮಲತಾ ಗಂಡ ನಂದ ಕಿಶೋರ ಬಜಾಜ್, 10.19 ಎಕರೆ | 1047500 | 547500 | 500000 |
| 4 | ಶ್ರಿ ಬಸಣ್ಣ ತಂದೆ ಶರಣಪ್ಪ, ಸರ್ವೇ ನಂ. 535/2, 3.01 ಎಕರೆ | 300000 | 0 | 300000 |
| | | | ಒಟ್ಟು | 1000000 |

18) ವಿನ್ಯಾಸಗಳು ಅನುಮೋದನೆ ಪಡೆದು ಎರಡು ವರ್ಷ ಮುಕ್ತಾಯಗೊಂಡ ನಂತರ ಕ್ರಮ ಜರುಗಿಸದೇ ಇರುವ ಬಗ್ಗೆ

2012-13 ರಿಂದ 2017-18ನೇ ಸಾಲಿನಲ್ಲಿ ಅನುಮೋದನೆ ಪಡೆದ ವಿನ್ಯಾಸಗಳಲ್ಲಿ ಷರತ್ತುಗಳು ಒಳಪಟ್ಟಿದ್ದು,ಅದರಲ್ಲಿ ವಿನ್ಯಾಸಗಳು ನಿಗಧಿತ ಸಮಯದಲ್ಲಿ ಪೂರ್ಣಗೊಳಿಸಲು ಸೂಚಿಸಿದ್ದು, ಇರುತ್ತದೆ. ಆದರೆ ಲೆಕ್ಕ ಪರಿಶೋಧನೆ ಸಮಯದಲ್ಲಿ ವಿನ್ಯಾಸಗಳ ಅನುಮೋದನೆ ನೀಡಿ ಷರತ್ತುಗಳ ಅನುಗುಣವಾಗಿ ಅವಧಿಯು ಮುಗಿದರು, ವಿನ್ಯಾಸಗಳು ಪೂರ್ಣಗೊಳ್ಳದೇ ಇರುವುದು ಅದರ ಎದುರಾಗಿ ಯಾವುದೇ ಕ್ರಮ ಜರುಗಿಸದೇ ಇರುವುದು ಕಂಡುಬಂದಿದೆ. ಇದರ ಬಗ್ಗೆ ವಿಚಾರಣಾ ಪತ್ರ **ಸಂಖ್ಯೆ: 20/30-1-2019 ರಂದು ವಿವರಣೆ ನೀಡಲು ಕೋರಲಾಗಿತ್ತು. ಆದರೆ ಯಾವುದೇ ವಿವರಣೆ ನೀಡಿರುವುದಿಲ್ಲ.**

ಮುಂದುವರೆದು, ಪ್ರತಿಯೊಂದು ವಿನ್ಯಾಸದ ಅವಧಿ ಮುಕ್ತಾಯದ ನಂತರ ವಿನ್ಯಾಸ ಪೂರ್ಣಗೊಂಡಿರಬೇಕು ಇಲ್ಲವಾದರೆ ಷರತ್ತುಗಳ ಅನುಗುಣವಾಗಿ ವಿನ್ಯಾಸಗಳು ತಾವೇ ಅಭಿವೃದ್ಧಿ ಪಡಿಸಬೇಕು ಇಲ್ಲವಾದಲ್ಲಿ, ಸಂಬಂಧಪಟ್ಟವರಿಂದ ವಿನ್ಯಾಸಗಳ ಅಭಿವೃದ್ಧಿ ಪಡಿಸಿ ಪೂರ್ಣಗೊಳಿಸಲು ನೋಟಿಸ್ ಕ್ರಮವನ್ನು ಜರುಗಿಸುವುದು ಅತ್ಯವಶ್ಯಕವಾಗಿರುತ್ತದೆ. ಇದರಿಂದ ವಿನ್ಯಾಸಗಳು ಅಭಿವೃದ್ಧಿ ಮತ್ತು ಪೂರ್ಣಗೊಳ್ಳಲು ಅನುಕೂಲವಾಗುತ್ತದೆ. ಇನ್ನು ಮುಂದಾದರೂ, ತಾವು ತಕ್ಷಣ ಕ್ರಮ ಜರುಗಿಸಲು ಈ ಮೂಲಕ ಸೂಚಿಸಲಾಗಿದೆ.

**19) ಬಿನಶೇತಕಿ ನೀಡುವಲ್ಲಿ ಕಡಿಮೆ ತಾಂತ್ರಿಕ ಶುಲ್ಕ ವಸೂಲಿಸಿರುವ ಬಗ್ಗೆ:**

ಶ್ರೀ ಶರಣ ತಂದೆ ನಂದಗೌಡ ಇವರ 4 ಎಕರೆ ಬಿನಶೇತಕಿ ಮೊತ್ತ ರೂ. 4000=00 ವಸೂಲಿಸಿರುತ್ತೀರಿ. ಆದರೆ ತಮ್ಮ ಸಭೆಯ ನಡುವಳಿ ದಿನಾಂಕ; 29-1-2016 ರಂದು ತಾಂತ್ರಿಕ ಶುಲ್ಕ ಪ್ರತಿ ಎಕರೆ ರೂ. 4000=00 ಹಾಗೂ ಲೆಕ್ಕ ಪರಿಶೋಧನೆ ಶುಲ್ಕ ಪ್ರತಿ ಎಕರೆ ರೂ. 1000=00 ದಂತೆ ನಿಗದಿಪಡಿಸಿರುತ್ತೀರಿ. ಆದರೆ ಸದರಿಯವರ ನಾಲ್ಕು ಎಕರೆಗೆ ತಾಂತ್ರಿಕ ಶುಲ್ಕವು ರೂ. 16000=00 ಗಳಾಗುತ್ತದೆ. ಮತ್ತು ಲೆಕ್ಕ ಪರಿಶೋಧನೆ ಶುಲ್ಕವು ರೂ. 4000=00 ಹೀಗೆ ಒಟ್ಟು ರೂ. 20000=00 ಗಳನ್ನು ವಸೂಲಿಸಬೇಕಾಗುತ್ತದೆ. ಆದರೆ ತಾವು ಕೇವಲ ರೂ. 4000=00 ಶುಲ್ಕವನ್ನು ವಸೂಲಿಸಿದ್ದು, ಆಡಿಟ್ ಗಮನಿಸಲಾಗಿದ್ದು, **ಇದರ ಬಗ್ಗೆ ವಿಚಾರಣೆ ಪತ್ರ ಸಂಖ್ಯೆ: 19/30-1-2019 ರಂದು ವಿವರಣೆ ನೀಡಲು ಕೋರಲಾಗಿತ್ತು. ಆದರೆ ಯಾವುದೇ ವಿವರಣೆ ನೀಡದೇ ಇರುವ ಪ್ರಯುಕ್ತ ಸದರಿ ಮೊತ್ತವನ್ನು ವಸೂಲಾತಿಯಲ್ಲಿ ಇಡಬಹುದಾಗಿದೆ.**

20) ತನಿಖಾ ಶುಲ್ಕ:

ಪ್ರಸಕ್ತ ಸಾಲಿನ ತನಿಖಾ ಶುಲ್ಕವನ್ನು ಈ ಕೆಳಗಿನಂತೆ ನಿಗದಿಪಡಿಸಲಾಗಿದೆ.

- ಪ್ರಸಕ್ತ ಸಾಲಿನ ಸ್ವೀಕೃತಿ 73470083=00
- ಪ್ರಸಕ್ತ ಸಾಲಿನ ಪಾವತಿ 65093188=00
- ಒಟ್ಟು 138563271=00
- ಸಿಬ್ಬಂದಿ ವೆಚ್ಚ (-) **976750=00**
- ಶುಲ್ಕಕ್ಕೆ ಅರ್ಹವಾದ ಮೊತ್ತ **137586521*0.20/100= 275173=00**

| ಆರಂಭಿಕ ಶಿಲ್ಕು | ಜಮೆ | ಒಟ್ಟು | ಇರಸಾಲು | ಅಂತಿಮ ಶಿಲ್ಕು |
|---|---|---|---|---|
| 0 | 275173 | 275173 | 0 | 275173 |

**ಲೆಕ್ಕ ಶಿರ್ಷಿಕೆ:- 0070-60-110-0-01**

ಸದರಿ ಸಂಸ್ಥೆಯ 2012-13 ರಿಂದ 2017-18ನೇ ಸಾಲಿನ ಲೆಕ್ಕ ತನಿಖಾ ಶುಲ್ಕ ರೂ. 275173=00 ಗಳನ್ನು ಬೇಗನೆ ಮೇಲೆ ನಮೂದಿಸಿದ ಲೆಕ್ಕ ಶೀರ್ಷಿಕೆಗೆ ತುಂಬಿ ಅನುಪಾಲನಾ ವರದಿ ನೀಡಲು ಸೂಚಿಸಲಾಗಿದೆ.

ಸಾಮಾನ್ಯಅಭಿಪ್ರಾಯ:

ಲೆಕ್ಕ ಪರಿಶೋಧನಾ ಸಮಯದಲ್ಲಿ ಹಾಜರಪಡಿಸಿದ ದಾಖಲಾತಿಗಳ ಆಧಾರದ ಮೇಲೆ ವರದಿಯನ್ನು ಸಿದ್ಧಪಡಿಸಲಾಗಿದೆ. ಆಯವ್ಯಯವನ್ನು ಸಿದ್ಧಪಡಿಸಿ ಅನುಮೋದನೆ ಪಡೆದಿರುವುದಿಲ್ಲ. ಮಾಸಿಕ ಮತ್ತು ವಾರ್ಷಿಕ ಲೆಕ್ಕಪತ್ರಗಳನ್ನು ನಿಗದಿತ ನಮೂನೆಯಲ್ಲಿ ತಯಾರಿಸಿರುವುದಿಲ್ಲ. ವಾರ್ಷಿಕ ಕಾರ್ಯನಿರ್ವಹಣಾ ವರದಿಯನ್ನು ಸಿದ್ಧಪಡಿಸಿರುವುದಿಲ್ಲ. ನಗದು ಪುಸ್ತಕ ನಿರ್ವಹಿಸಿರುವುದಿಲ್ಲ; ಚೆಕ್ ಮೆಮೋ ರಿಜಿಸ್ಟರ್ ಮೇಲೆಯೇ ಲೆಕ್ಕ ಪರಿಶೋಧನೆ ನಡೆಸಬೇಕಾಗಿದ್ದು, ಸ್ವೀಕೃತಿ ಮತ್ತು ಪಾವತಿಯನ್ನೊಳಗೊಂಡ ಸಮಗ್ರ ನಗದು ಪುಸ್ತಕ ನಿರ್ವಹಿಸಬೇಕಾಗಿರುತ್ತದೆ. ನಗದು ಪುಸ್ತಕ ನಿರ್ವಹಿಸಲು ಶೀಘ್ರ ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ಜಂಟಿ ನಿರ್ದೇಶಕರು
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ
ಕಲಬುರಗಿ

## ಅನುಬಂಧ-1

### ನಗರ ಯೋಜನಾ ಪ್ರಾಧಿಕಾರದ ವ್ಯಾಪ್ತಿ ಬರುವ ವಿನ್ಯಾಸ ಅನುಮೋದನೆ ನೀಡಿದ ವಿವರ

| ಕ್ರ ಸಂ | ಅರ್ಜಿದಾರರ ಹೆಸರು | ಗ್ರಾಮ /ಪಟ್ಟಣ | ಸರ್ವೇ ನಂ | ವಿಸ್ತೀರ್ಣ | | ವಿನ್ಯಾಸ ಅನುಮೋದಿಸಿದ ದಿನಾಂಕ | ಉದ್ದೇಶ | ಲೇಔಟ್ ಪರಿಶೋಧನೆ ಫೀ | ಉತ್ತಮತೆ ಶುಲ್ಕ | ಕೆರೆಹೊಂದ ಶುಲ್ಕ | ಸ್ಲಂ ಸೆಸ್ | ಈಗಾಗಲೇ ಕಟ್ಟಿದ ಕಟ್ಟಿರುವುದಕ್ಕೆ ಶುಲ್ಕ | ಒಟ್ಟು |
|---|---|---|---|---|---|---|---|---|---|---|---|---|---|
| | | | | ಎಕರೆ | ಗುಂಟೆ | | | | | | | | |
| 1 | ಶ್ರೀ ಶೇಖ ಅಬ್ದುಲ ತಂದೆ ಅಬ್ದುಲ ಸಲೀಮ ನಾಲವಾರ | ಕೆ. ಚಿತ್ತಾಪೂ | 7/5 | 1 | 0 | 11-10-2012 | ವಸತಿ | 1000 | 6075 | 0 | 0 | 0 | 7075 |
| 2 | ಶ್ರೀ ಮಹ್ಮದ ಯುಸೂಫ ತಂದೆ ಅಬ್ದುಲ ಮೇಮಾರ | ಕೆ. ಚಿತ್ತಾಪೂ | 7/4 | 1 | 0 | 12-01-2012 | ವಸತಿ | 500 | 6075 | 0 | 0 | 0 | 6575 |
| 3 | ಮುಖ್ಯಾಧಿಕಾರಿಗಳು ಪುರಸಭೆ ಚಿತ್ತಾಪೂರ | | 205/1<br>205/2 | 8 | 18 | 12-10-2012 | ವಸತಿ | 9000 | 0 | 0 | 0 | 0 | 9000 |
| 4 | ಶ್ರೀಮತಿ ಪ್ರೇಮಲತಾ ಗಂಡ ನಂದಕಿಶೋರ ಬಜಾಜ್ | | 116/1 | 10 | 19 | 12-10-2012 | ವಸತಿ | 11000 | 63590 | 547500 | 0 | 0 | 622090 |
| | | | | | | | ಒಟ್ಟು | 21500 | 75740 | 547500 | 0 | 0 | 644740 |
| 5 | ಶ್ರೀ ಬಸಣ್ಣ ತಂದೆ ಶರಣಬಸಪ್ಪಾ | ಕೆ. ನಾಗಾಂವ | 535/2 | 3 | 1 | 23-1-2013 | ವಸತಿ | 4000 | 18363 | 0 | 0 | 0 | 22363 |
| 6 | ಕಾರ್ಯದರ್ಶಿಗಳು, ತಾಲೂಕು ಪರಿ ಸಂಗೋಪನಾ ಮತ್ತು ಉಣ್ಣೆ ಉತ್ಪಾದಕರ ಸಹಕಾರಿ ಸಂಘ ಚಿತ್ತಾಪೂರ | ಕೆ. ನಾಗಾಂವ | 535/3 | 2 | 0 | 23-1-2013 | ಕೈಗಾರಿಕೆ | 4000 | 20235 | 0 | 0 | 0 | 24235 |
| | | | | | | | ಒಟ್ಟು | 8000 | 38598 | 0 | 0 | 0 | 46598 |
| 7 | ಶ್ರೀ ವಿಜಯಕುಮಾರ ತಂದೆ ಮಲ್ಲರೆಡ್ಡಿ ದೇಶಮುಖ್ | ಪೇಠ ಚಿತ್ತಾಪೂರ | 1/5/6/7 | 20 | 34 | 26-11-2014 | ವಸತಿ | 0 | 144270 | 2085000 | 0 | 0 | 2229270 |
| | | | | | | | ಒಟ್ಟು | 0 | 144270 | 2085000 | 0 | 0 | 2229270 |
| 8 | ಶ್ರೀ ಮಹ್ಮದ ಸಾಜೀದ ಆಲಿ ತಂದೆ ಅಬ್ದುಲ ಖದೀರ | ಪೇಠ ಚಿತ್ತಾಪೂರ | 121/5 | 2 | 2 | 10-2-2015 | ವಸತಿ | 0 | 12500 | 205000 | | 0 | 217500 |
| 9 | ಶ್ರೀಮತಿ ಸುಶೀಲಬಾಯಿ ಗಂಡ ತುಕಾರಾಮ ಗೌಳಿ | ಪೇಠ ಚಿತ್ತಾಪೂರ | 124/2, 124/8 | 5 | 11 | 10-02-2015 | ವಸತಿ | 0 | 32050 | 527500 | | 0 | 559550 |
| 10 | ಶ್ರೀ ದಯಾನಂದ ತಂದೆ ಶೇತವಾಜಿ ಗೌಳಿ | ಪೇಠ ಚಿತ್ತಾಪೂರ | 124/4,<br>124/10 | 1<br>2 | 7<br>0 | 10-12-2015 | ವಸತಿ | 0 | 19300 | 3075000 | 0 | 0 | 3094300 |
| 11 | ಶ್ರೀ ಪಿ.ಕೆ. ಸಿಂಗಾನಿಯಾ ಸಿನಿಯರ ವೈಸ ಪ್ರೆಸಿಡೆಂಟ್ (ವರ್ಕ್ಸ್) ಫ್ಯಾಕ್ಟರಿ ಕಂಪನಿ ಲಿಮಿಟೆಡ್ | ಚಿತ್ತಾಪೂರ | 91,92,93,86,98,101,<br>102,103,104,105,106<br>ಎಫ್, 107,115,116,113,112,<br>81,82,83,84,109/1,110 | 237 | 3 | 18-8-2015 | ಕೈಗಾರಿಕೆ (ಸಿಮೆಂಟ್ ಫ್ಯಾಕ್ಟರಿ) | 1190000 | 2397855 | 23707500 | 0 | 110420 | 27405775 |
| 12 | ಶ್ರೀ ಪಿ.ಕೆ. ಸಿಂಗಾನಿಯಾ ಸಿನಿಯರ ವೈಸ ಪ್ರೆಸಿಡೆಂಟ್ (ವರ್ಕ್ಸ್) ಫ್ಯಾಕ್ಟರಿ ಕಂಪನಿ ಲಿಮಿಟೆಡ್ | ಚಿತ್ತಾಪೂರ | 75 | 6 | 33 | 18-8-2015 | ವಸತಿ | 35000 | 69055 | 682500 | 0 | 27625 | 814180 |
| | | | | | | | ಒಟ್ಟು | 1225000 | 2530760 | 28197500 | 0 | 138045 | 32091305 |

| | | | | | | | | | | | | | |
|---|---|---|---|---|---|---|---|---|---|---|---|---|---|
| 13 | ಕಾರ್ಯದರ್ಶಿಗಳು, ಎಲ್ ಆರ್.ರಾಯ್ ಶಿಕ್ಷಣ ಸಂಸ್ಥೆ | ಪೇಠ ಚಿತ್ತಾಪೂರ | 140/2 | 0 | 37 | 11-1-2016 | ವಾಣಿಜ್ಯ (ಮಳಿಗೆಗಳು) | 8000 | 14975 | 92500 | 1872 | 0 | 117347 |
| 14 | ಶ್ರೀ ಪ್ರಭು ತಂದೆ ರೇವೂ ರಾಠೋಡ | ಕೆ.ಚಿತ್ತಾಪೂರ | 643 | 1 | 4 | 18-1-2016 | ವಸತಿ | 2000 | 6680 | 110000 | 0 | 0 | 118680 |
| 15 | ಶ್ರೀ ಸೋಮಶೇಖರ ತಂದೆ ಬಾಪುರಾವ ಪಾಟೀಲ್ | ಪೇಠ ಚಿತ್ತಾಪೂರ | 95/1 | 05 ಎಕರೆ 13 ಗುಂಟೆ ಪೈಕಿ 1 ಎಕರೆ 00 | | 12-4-2016 | ವಾಣಿಜ್ಯ (ಕಲ್ಯಾಣ ಮಂಟಪ) | 16000 | 18620 | 115000 | 0 | 0 | 149620 |
| 16 | ಶ್ರೀ ಶಿವಯೋಗಿ ತಂದೆ ಶಿವರಾಯ ಕಾಳಗಿ | ಕೆ.ಚಿತ್ತಾಪೂರ | 208/3 | 0 | 30 | 22-6-2016 | ವಸತಿ | 4000 | 4553 | 75000 | 0 | 0 | 83553 |
| 17 | ಶ್ರೀ ಮಹಾದೇವ ತಂದೆ ಬಸಣ್ಣ ಪೂಜಾರಿ | ಕೆ.ನಾಗಾಂವ | 534/2ಅ | 1 | 0 | 15-4-2016 | ವಸತಿ | 8000 | 6980 | 45000 | 0 | 0 | 59980 |
| 18 | ಶ್ರೀ ಸುನಿಲಕುಮಾರ ತಂದೆ ಯಲ್ಲಪ್ಪಾ ಜಿತುರೆ ಹಾಗೂ ಶ್ರೀಮತಿ ರೇಖಾ ತಂಡ ಸುನಿಲಕುಮಾರ ಜಿತುರೆ | ಮುಡಬೂಳ | 76/5, 76/4 | 02 ಎಕರೆ 04 ಗುಂಟೆ ಹಾಗೂ 02 ಎಕರೆ 04 ಗುಂಟೆ ಒಟ್ಟು 04 ಎಕರೆ 08 ಗುಂಟೆ | | 2-7-2016 | ವಸತಿ | 20000 | 25500 | 420000 | 0 | 0 | 465500 |
| 19 | ಶ್ರೀ ಸಲೀಮ್ ಅಹಮ್ಮದ್ ತಂದೆ ಹಾಜಿಮಿಯಾ | ಪೇಠ ಚಿತ್ತಾಪೂರ | 106/2 | 3 | 0 | 30-4-2016 | ವಸತಿ | 12000 | 18210 | 300000 | 0 | 0 | 330210 |
| 20 | ಶ್ರೀ ಸಂದೀಪ ತಂದೆ ಬಸ್ಸಪ್ಪ ಬೈಟಿಪೂಲಿ | ಪೇಠ ಚಿತ್ತಾಪೂರ | 101/1 | 2 ಎಕರೆ ಪೈಕಿ 9050 ಚ.ಅಡಿ | 0 | 26-10-2016 | ವಾಣಿಜಜ್ಯ ಲಾಡ್ಜಿಂಗ್ & ಬೋರ್ಡಿಂಗ್ | 8000 | 3365 | 20780 | 0 | 0 | 32145 |
| 21 | ಶ್ರೀ ಮಲ್ಲಣ್ಣ ತಂದೆ ಶರಣಪ್ಪ ಮುಡಬೂಳ | ಕೆ.ಚಿತ್ತಾಪೂರ | 5/3 | 2 | 0 | 15-11-2016 | ವಸತಿ | 8000 | 12141 | 200000 | 0 | 0 | 220141 |
| | | | | | | | ಒಟ್ಟು | 86000 | 111024 | 1378280 | 1872 | 0 | 1577176 |
| 22 | ಶ್ರೀ ಮಹೇಶ ತಂದೆ ಮಹಾದೇವ ಕಡೆಚೂರ | ಪೇಠ ಚಿತ್ತಾಪೂರ | 105/2 | 12 ಎಕರೆ 12 ಗುಂಟೆ ಪೈಕಿ 11 ಎಕರೆ 32 ಗುಂಟೆ | | 21-1-2017 | ವಸತಿ | 48000 | 71629 | 1180000 | 0 | 0 | 1299629 |
| 23 | ಶ್ರೀ ಖಿಮರೋದ್ದಿನ್ ತಂದೆ ಅಬ್ದುಲ್ ಗನಿ | ಪೇಠ ಚಿತ್ತಾಪೂರ | 1/4 | (12.000 ಚ.ಅಡಿ) 1114.83 ಚ.ಮೀ) | | 16-9-2017 | ವಾಣಿಜ್ಯ (ಕಲ್ಯಾಣ ಮಂಟಪ) | 8000 | 4459 | 5571 | 557 | 0 | 18587 |
| 24 | ಶ್ರೀ ಸಿದ್ದಲಿಂಗರೆಡ್ಡಿ ತಂದೆ ಬಸಣ್ಣಾ ನಾಲವಾರ | ಕೆ.ಚಿತ್ತಾಪೂರ | 301/1 | 0 | 23 | 8-11-2017 | ವಾಣಿಜ್ಯ (ಯಾತ್ರಿಕ ನಿವಾಸ) | 8000 | 9308 | 11635 | 1163 | 0 | 30106 |
| 25 | ಶ್ರೀ ಅಬ್ದುಲ್ ಗಫೂರ ತಂದೆ ಅಬ್ದುಲ್ ಸಲೀಮ ಬಶೀರ ಗಂಜ | ಮುಡಬೂಳ | 62/3 | 1 | 0 | 20-11-2017 | ವಾನಿಜ್ಯ (ಪಂಕ್ಷನ್ ಹಾಲ್ ಹಾಗೂ ವಾಣಿಜ್ಯ ಮಳಿಗೆಗಳು | 8000 | 9308 | 11635 | 1163 | 0 | 30106 |
| 26 | ಶ್ರೀ ಮಹ್ಮದ್ ಸಾಬೀರ ತಂದೆ ಶೇಖ್ ಮಹ್ಮದ ಸಾಬ ಬಡೆಘರ, ಪೋಲಿಸ್ ಸ್ಟೇಶನ್ ರೋಡ್ ಚಿತ್ತಾಪೂರ | ಮುಡಬೂಳ | 62/2 | 1 | 0 | 20-11-2017 | ವಾಣಿಜ್ಯ (ಪೆಟ್ರೋಲ್ ಬಂಕ್ ಹಾಗು ವಾಣಿಜ್ಯ ಮಳಿಗೆಗಳು | 8000 | 16187 | 20234 | 2023 | 0 | 46444 |
| | | | | | | | ಒಟ್ಟು | 80000 | 110891 | 1229075 | 4906 | 0 | 1424872 |

| | | | | | | | | | | | | | |
|---|---|---|---|---|---|---|---|---|---|---|---|---|---|
| 27 | ಶ್ರೀ ಹೀರಲಾಲ ತಂದೆ ಮಾರುತಿರಾವ ಕಾನಪುರ್ಕಿ ಸಾ: ಚಿತ್ತಾಪೂರ ಜಿ: ಕಲಬುರಗಿ | ಪೇಠ ಚಿತ್ತಾಪೂರ | 36 | 05 ಎಕರೆ 30 ಗುಂಟೆ ಪೈಕಿ 01 ಗುಂಟೆ ಪೋಟ ಖಿರಾಬ ಹೊರತಪಡಿಸಿ ಉಳಿದ 05 ಎಕರೆ 29 ಗುಂಟೆ | | 24-1-2018 | ವಸತಿ | 24000 | 34905 | 116350 | 11635 | 0 | 186890 |
| 28 | ಶ್ರೀ ಪಾಂಡುರಂಗ ತಂದೆ ರೇವೂ ರಾಠೋಡ ಸಾ: ಚಿತ್ತಾಪೂರ ಜಿ: ಕಲಬುರಗಿ | ಪೇಠ ಚಿತ್ತಾಪೂರ | 37/2 | 6 | 11 | 24-1-2018 | ವಸತಿ | 28000 | 38093 | 126975 | 12698 | 0 | 205766 |
| 29 | ಶ್ರೀ ಶಿವಾನಂದ ಮತ್ತು ಮಲ್ಲಿಕಾರ್ಜುನ್ ತಂದೆ ಚೆನ್ನಬಸಯ್ಯ ಸಾಲಿಮಠ ಸಾ: ಚಿತ್ತಾಪೂರ ಜಿ: ಕಲಬುರಗಿ | ಪೇಠ ಚಿತ್ತಾಪೂರ | 101/2 | 6 | 30 | 31-3-2018 | ವಸತಿ | 28000 | 40974 | 136582 | 13658 | 0 | 219214 |
| | | | | | | | ಒಟ್ಟು | 80000 | 113972 | 379907 | 37991 | 0 | 611870 |
| | | | | | | | ಒಟ್ಟು | 1414500 | 3125255 | 33817262 | 44769 | 138045 | 38625831 |

ಜಂಟಿ ನಿರ್ದೇಶಕರು,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಕಲಬುರಗಿ

9

## ಅನುಬಂಧ-2

### ಜಿನ್‌ಶೇತ್ಕಿ ಅನುಮೋದನೆ ನೀಡಿದ ವಿವರ 2012 ರಿಂದ 2017-18 ರವರೆಗೆ

| ಕ್ರ ಸಂ | ಅರ್ಜಿದಾರರ ಹೆಸರು | ಗ್ರಾಮ/ಪಟ್ಟಣ | ನೀರಾಪೇಕ್ಷಣಾ ಪತ್ರ ನೀಡಿದ ದಿನಾಂಕ | ಲೆಕ್ಕ ಪರಿಶೋಧನಾ ಶುಲ್ಕ | ತಾಂತ್ರಿಕ ಶುಲ್ಕ | ಒಟ್ಟು |
|---|---|---|---|---|---|---|
| 1 | ಶ್ರೀ ಸಲಿಂ ಅಹ್ಮದ್ ತಂದೆ ಹಾಜಿಮಿಯಾ ಸಾ: ಚಿತ್ತಾಪೂರ | ಪೇಠ ಚಿತ್ತಾಪೂರ ಸರ್ವೇ ನಂ. 166/2 | 03-01-12 | 0 | 0 | 0 |
| 2 | ಶ್ರೀ ಶೇಖ್ ಯುನುಸ್ ತಂದೆ ಶೇಖಲಾಲ ಬಾದಶಾ ಸಾ: ಚಿತ್ತಾಪೂರ | ಕೆ. ನಾಗಾಂವ ಸರ್ವೇ ನಂ. 14/2 | 03-01-12 | 0 | | 0 |
| 3 | ಶ್ರೀಮತಿ ಖಿರಸಿದ ಬೇಗಂ ಗಂಡ ಅಬ್ದುಲ್ ಸಮದ ಕಸಬಾ ಸಾ: ಚಿತ್ತಾಪೂರ | ಕೆ. ನಾಗಾಂವ ಸರ್ವೇ ನಂ. 543 | 12-10-12 | 0 | | 0 |
| | | | ಒಟ್ಟು | 0 | 0 | 0 |
| 4 | ಶ್ರೀಮತಿ ಶ್ರೀದೇವಿ ಗಂಡ ಬಸವರಾಜ ಪಾಟೀಲ್ ಸಾ: ಚಿತ್ತಾಪೂರ | ಪೇಠ ಚಿತ್ತಾಪೂರ ಸರ್ವೇ ನಂ. 87/2 | 31-01-13 | 5500 | 0 | 5500 |
| 5 | ಶ್ರೀ ಸೂರ್ಯಕಾಂತ ತಂದೆ ಬಾಪುರಾವ ಪಾಟೀಲ್ | ಮುಡಬೂಳ 76/4 | 19-01-13 | 3500 | 0 | 3500 |
| 6 | ಶ್ರೀಮತಿ ರೇಖಾ ಗಂಡ ಸುನೀಲಕುಮಾರ | ಕೆ. ಚಿತ್ತಾಪೂರ 56/2 | 06-12-13 | 1100 | 1100 | 2200 |
| | | | ಒಟ್ಟು | 10100 | 1100 | 11200 |
| 7 | ಶ್ರೀ ಹಣಮಂತ ತಂದೆ ಹಾಸಪ್ಪ ಸಾ: ಚಿತ್ತಾಪೂರ | ಕೆ. ಚಿತ್ತಾಪೂರ 56/2 | 22-04-14 | 1100 | 1100 | 2200 |
| 8 | ಶ್ರೀ ದಯಾನಂದ ತಂದೆ ಶೇಠವಾಜಿ ಗೌಳಿ | ಪೇಠ ಚಿತ್ತಾಪೂರ 124/4 ಮತ್ತು 124/10 | 13-06-14 | 2590 | 2590 | 5180 |
| 9 | ಶ್ರೀಮತಿ ಶುಶೀಲಬಾಯಿ ಗೌಳಿ ಸಾ: ಚಿತ್ತಾಪೂರ | ಪೇಠ ಚಿತ್ತಾಪೂರ 124/2 ಮತ್ತು 124/8 | 13-06-14 | 3640 | 3640 | 7280 |
| 10 | ಶ್ರೀ ಪ್ರಭು ರಾಠೋಡ ತಂದೆ ರೇವೂ ರಾಠೋಡ ಸಾ: ಚಿತ್ತಾಪೂರ | ಪೇಠ ಚಿತ್ತಾಪೂರ 643 | 14-07-14 | 1100 | 1100 | 2200 |
| 11 | ಶ್ರೀ ಚಂದ್ರಶೇಖರ ತಂದೆ ಶಿವರುದ್ರಪ್ಪ ತಾಂತ | ಕೆ. ಚಿತ್ತಾಪೂರ 327/2 | 30-08-14 | 1100 | 1100 | 2200 |
| 12 | ಶ್ರೀ ಮಹ್ಮದ್ ಸಾಜೀದ ಅಲಿ ತಂದೆ ಅಬ್ದುಲ್ ಕಬೀರ | ಪೇಠ ಚಿತ್ತಾಪೂರ 121/5 | 10-10-14 | 2025 | 2025 | 4050 |
| | | | ಒಟ್ಟು | 11555 | 11555 | 23110 |
| 13 | ಶ್ರೀ ಸಂದೀಪ ತಂದೆ ಬಸಪ್ಪ ಬೈಬಪೂಲ ಸಾ: ಮಳಖೇಡ | ಪೇಠ ಚಿತ್ತಾಪೂರ 101/1 | 27-01-15 | 0 | 500 | 500 |
| 14 | ಶ್ರೀ ಧನರಾಜ ತಂದೆ ನರಸಪ್ಪ ಯಾದವ | ಪೇಠ ಚಿತ್ತಾಪೂರ 124/3 | 27-02-15 | 3000 | 0 | 3000 |
| 15 | ಶ್ರೀ ಸುನೀಲಕುಮಾರ ತಂದೆ ಯಲ್ಲುಸಾ ಜಿತುರೆ | ಮುಡಬೂಳ 76/5 | 22-05-15 | 2100 | 2100 | 4200 |
| 16 | ಓರಿಯಂಟ ಸಿಮೆಂಟ್ ಲಿಮಿಟೆಡ್ | ಇಟಗಾ 75/1 | 03-06-15 | 0 | 0 | 0 |
| 17 | ಶ್ರೀ ಶಿವಯೋಗಿ ತಂದೆ ಶಿವರಾಯ ಕಾಳಗಿ | ಕೆ. ನಾಗಾಂವ 208/2 | 21-12-15 | 1000 | 8000 | 9000 |
| 18 | ಶ್ರೀ ಶಿವಾನಂದ @ ಮಲ್ಲಿಕಾರ್ಜುನ್ ತಂದೆ ಚನಬಸಪ್ಪ | ಪೇಠ ಚಿತ್ತಾಪೂರ 101/2 | 21-12-15 | 28000 | 28000 | 56000 |
| | | | ಒಟ್ಟು | 34100 | 38600 | 72700 |

| | | | | | | |
|---|---|---|---|---|---|---|
| 19 | ಶ್ರೀ ಮಹೇಶ ತಂದೆ ಮಹಾದೇವಪ್ಪ ಕಡೆಚೂರ ಸಾ: ಚಿತ್ತಾಪುರ | ಪೇಠ ಚಿತ್ತಾಪೂರ 105/2 | 04-01-16 | 0 | 0 | 0 |
| 20 | ಶ್ರೀ ಜಿ. ರವಿ ಪ್ರಕಾಶ ತಂದೆ ಸ್ವಯಂ ಪ್ರಕಾಶ ಸಾ: ಚಿತ್ತಾಪೂರ | ಕೆ. ನಾಗಾಂವ 533 | 16-01-16 | 16000 | 1000 | 17000 |
| 21 | ಶ್ರೀ ಜಗನ್ನಾಥ ತಂದೆ ಲಕ್ಷ್ಮೀನಾರಾಯಣ ಸಾ: ಚಿತ್ತಾಪೂರ | ಮುಡಬೂಳ 78/3 | 18-01-16 | 20000 | 2500 | 22500 |
| 22 | ಶ್ರೀ ಜಗನ್ನಾಥ ತಂದೆ ಲಕ್ಷ್ಮೀನಾರಾಯಣ ಸಾ: ಚಿತ್ತಾಪೂರ | ಮುಡಬೂಳ 62/6 | 18-01-16 | 20000 | 2500 | 22500 |
| 23 | ಶ್ರೀ ಮೈಹಿಮೂದಮಿಯಾ ತಂದೆ ಮಕ್ತಮಸಾಬ ಸಾ: ದಂಡೋತಿ | ಮರಗೋಳ 132/1 | 18-04-16 | 0 | 0 | 0 |
| 24 | ಶ್ರೀ ಶರಣಗೌಡ ತಂದೆ ನಂದಗೌಡ ಕೋರವಾರ | ಕೆ. ನಾಗಾಂವ 541/5 | 25-04-16 | 4000 | 0 | 4000 |
| 25 | ಶ್ರೀ ಸುರೇಶ ತಂದೆ ಅಂಬಣ್ಣಾ ಅಳ್ಳೊಳ್ಳಿ | ಕೆ. ಚಿತ್ತಾಪೂರ 309/7 | 13-05-16 | 1000 | 8000 | 9000 |
| 26 | ಶ್ರೀ ಖಿಮರುದ್ದೀನ್ ತಂದೆ ಅಬ್ದುಲ್ ಗನಿ ಖುರೇಶಿ ಅಸರ ಮೊಹಲ್ಲಾ ಚಿತ್ತಾಪೂರ | ಪೇಠ ಚಿತ್ತಾಪೂರ 1/4 | 18-05-16 | 1000 | 8000 | 9000 |
| 27 | ಶ್ರೀ ಇಕ್ಬಾಲ ಅಹ್ಮದ್ ತಂದೆ ಶೇಖ ಹುಸೇನ | ಮುಡಬೂಳ 76/1 | 18-05-16 | 5000 | 20000 | 25000 |
| 28 | " ದಿ ಗ್ಲೂರಿ ಆಫ್ ಜೇಸಸ್ ಮಿನ್ಸಿಸ್ಟ್ರೀಸ್, ಟ್ರಸ್ಟ್ (ರಿ) ಸಾ: ಆಶ್ರಯ ಕಾಲೋನಿ ಚಿತ್ತಾಪೂರ | ಕೆ. ನಾಗಾಂವ 214 | 30-06-16 | 0 | 0 | 0 |
| 29 | ಶ್ರೀ ಹೀರಾಲಾಲ ತಂದೆ ಮಾರುತರಾವ ಕಾನಕುರ್ತಿ ಸಾ: ಚಿತ್ತಾಪೂರ | ಪೇಠ ಚಿತ್ತಾಪೂರ 36 | 07-09-16 | 6000 | 24000 | 30000 |
| 30 | ಶ್ರೀ ಪಾಂಡುರಂಗ ತಂದೆ ರೇವೂ ರಾಠೋಡ ಸಾ: ಚಿತ್ತಾಪೂರ | ಪೇಠ ಚಿತ್ತಾಪೂರ 37/2 | 07-09-16 | 7000 | 28000 | 35000 |
| 31 | ಶ್ರೀ ರವೀಂದ್ರ ತಂದೆ ಗೋಪಾಲರಾವ ಹಂಚಾಟೆ ಸಾ: ಚಿತ್ತಾಪೂರ | ಪೇಠ ಚಿತ್ತಾಪೂರ 105/1 | 08-09-16 | 13000 | 52000 | 65000 |
| 32 | ಶ್ರೀ ಸಿದ್ದಲಿಂಗರೆಡ್ಡಿ ತಂದೆ ಬಸಣ್ಣಾ ನಾಲವಾರ ಸಾ: ಚಿತ್ತಾಪೂರ | ಕೆ. ಚಿತ್ತಾಪೂರ 301/1 | 21-10-16 | 1000 | 8000 | 9000 |
| 33 | ಶ್ರೀ ಶಿವಮಂದ್ರಪ್ಪ ತಂದೆ ರಾಮಣ್ಣ ಮುಡಬೂಳ ಸಾ: ಚಿತ್ತಾಪೂರ | ಕೆ. ಚಿತ್ತಾಪೂರ 33/1/ಬಿ | 16-11-16 | 2000 | 16000 | 18000 |
| | | | ಒಟ್ಟು | 96000 | 170000 | 266000 |
| 34 | ಶ್ರೀ ಅಬ್ದುಲ್ ಗಫೂರ್ ತಂದೆ ಅಬ್ದುಲ್ ಸಲೀಮ್ ಸಾ: ಚಿತ್ತಾಪೂರ | ಪೇಠ ಚಿತ್ತಾಪೂರ 100/2/1 | 27-01-17 | 5000 | 20000 | 25000 |
| 35 | ಶ್ರೀ ಅಬ್ದುಲ್ ಗಫೂರ್ ತಂದೆ ಅಬ್ದುಲ್ ಸಲೀಮ್ ಸಾ: ಚಿತ್ತಾಪೂರ | ಮುಡಬೂಳ 62/3 | 27-01-17 | 1000 | 8000 | 9000 |
| 36 | ಶ್ರೀ ಮಹ್ಮದ್ ಸಾಬೀರ್ ತಂದೆ ಶೇಖ್ ಮಹ್ಮದ್ ಸಾಬ ಬಥೇಘರ್ ತಾ: ಚಿತ್ತಾಪೂರ | ಮುಡಬೂಳ 62/2 | 27-01-17 | 1000 | 8000 | 9000 |
| 37 | ಶ್ರೀ ಅಶ್ವಥರಾಮ ತಂದೆ ತುಕರಾಮ ರಾಠೋಡ ಸಾ: ಚಿತ್ತಾಪೂರ | ಕೆ. ಚಿತ್ತಾಪೂರ 197/3 | 24-08-17 | 2000 | 16000 | 18000 |
| 38 | ಶ್ರೀ ಬಸಪ್ಪ ತಂದೆ ಸಾಬಣ್ಣಾ ಹರಿಜನ ಸಾ: ಚಿತ್ತಾಪೂರ | ಪೇಠ ಚಿತ್ತಾಪೂರ 108/3 | 04-09-17 | 2000 | 8000 | 10000 |
| 39 | ಶ್ರೀಮತಿ ಶಾಂತಾ ಗಂಡ ಬಶೆಟ್ಟೆಪ್ಪಾ | ಪೇಠ ಚಿತ್ತಾಪೂರ 24/2 | 09-11-17 | 4000 | 16000 | 20000 |
| 40 | ಶ್ರೀ ಸಿಮೆಂಟ್ ಲಿಮಿಟೆಡ್ | ಕೆ. ನಾಗಾಂವ & ಕೆ. ಚಿತ್ತಾಪೂರ | 12-12-17 | 0 | 0 | 0 |
| 41 | ಶ್ರೀಮತಿ ದೇವಕಮ್ಮ ಗಂಡ ಚಂದ್ರಶೇಖರ ಗೌನಳ್ಳೀ | ಪೇಠ ಚಿತ್ತಾಪೂರ 107/3 | 15-12-17 | 1000 | 8800 | 9800 |
| | | | ಒಟ್ಟು | 16000 | 84800 | 100800 |

| | | | | | | |
|---|---|---|---|---|---|---|
| 42 | ಶ್ರೀಮತಿ ಮಹೆಬೂಬ ಬಿ ಗಂಡ ಗೌಸ್ ಪಟೇಲ್ | ಮರಗೋಳ 131/5 | 09-02-18 | 2000 | 16000 | 18000 |
| 43 | ಶ್ರೀ ಮಹಾದೇವಿ ಗಂಡ ವಿರೇಶ ಹಾಗು ಇತರರು | ಕೆ. ಚಿತ್ತಾಪೂರ 1/1 ಹಾಗೂ ಇತರೆ ಸರ್ವೆ | 01-03-18 | 3000 | 12000 | 15000 |
| 44 | ಶ್ರಿ ಪ್ರಧಾನ ಕಾರ್ಯದರ್ಶಿ ಶ್ರೀ ರೇಣುಕಾ ಯಲ್ಲಮ್ಮ ವೇಲ್‌ಫೇರ್ ಟ್ರಸ್ಟ್ (ರಿ) ಚಿತ್ತಾಪೂರ | ಮುಡಬೂಳ 79/2 | 31-03-18 | 0 | 0 | 0 |
| 45 | ಶ್ರೀ ನಾಗರೆಡ್ಡಿ ಪಾಟೀಲ ತಂದೆ ಬಸಣ್ಣಗೌಡ ಪಾಟೀಲ | ಕೆ. ನಾಗಾಂವ 540/6 ಮತ್ತು 541/4 | 20-08-18 | 2000 | 12000 | 14000 |
| 46 | ಶ್ರೀ ಮಹ್ಮದ್ ಸಾಬೀರ್ ತಂದೆ ಶೇಖ್ ಮಹ್ಮದ್ ಸಾಬ ಬಢೇಘರ್ ತಾ: ಚಿತ್ತಾಪೂರ | ಪೇಠ ಚಿತ್ತಾಪೂರ 90 | 18-09-18 | 1000 | 8000 | 9000 |
| 47 | ಶ್ರೀ ನಾಗರೆಡ್ಡಿ ತಂದೆ ಬಸಣ್ಣ ನಾಲವಾರ ಸಾ: ಚಿತ್ತಾಪೂರ | ಕೆ. ಚಿತ್ತಾಪೂರ 301/7 | 23-10-18 | 1000 | | 1000 |
| 48 | ಶ್ರೀ ರವೀಂದ್ರ ತಂದೆ ಚಂದ್ರಶೇಖರ ಸಜ್ಜನಶೆಟ್ಟಿ | ಕೆ.ಚಿತ್ತಾಪೂರ 5/2, 5/5, 5/7 | 07-11-18 | 3000 | 12000 | 15000 |
| | | | ಒಟ್ಟು | 12000 | 60000 | 72000 |
| | | | | 179755 | 366055 | 545810 |

ಜಂಟಿ ನಿರ್ದೇಶಕರು,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,
ಕಲಬುರಗಿ

ನಗರ ಯೋಜನಾ ಪ್ರಾಧಿಕಾರ ಚಿತ್ತಾಪೂರ ಇದರ 2012-13 ರಿಂದ 2017-18 ವರೆಗಿನ ಆರ್ಥಿಕ ಪರಿಸ್ಥಿತಿ

| ಕ್ರ ಸಂ | ಬ್ಯಾಂಕ್ ಹೆಸರು | ಖಾತೆ ಸಂಖ್ಯೆ | ವರ್ಷ | ಪ್ರಾರಂಭ ಶಿಲ್ಕು | ಶುಲ್ಕ | ಬಡ್ಡಿ | ಇತರೆ | ವರ್ಗಾವಣೆ | ಒಟ್ಟು | ಖರ್ಚು | ವರ್ಗಾವಣೆ | ಒಟ್ಟು | ಅಂತಿಮ ಶಿಲ್ಕು |
|---|---|---|---|---|---|---|---|---|---|---|---|---|---|
| 1 | ಎಸ್.ಬಿ.ಐ | 62233843387 | 2012-13 | 0 | 735065 | 9841 | 0 | 0 | 744906 | 0 | 0 | 0 | 744906 |
| 2 | ಎಸ್.ಬಿ.ಐ | 62233843387 | 2013-14 | 744906 | 1575268 | 55076 | 0 | 0 | 2375250 | 3000 | 0 | 3000 | 2372250 |
| 3 | ಎಸ್.ಬಿ.ಐ | 62233843387 | 2014-15 | 2372250 | 3502294 | 87669 | 0 | 0 | 5962213 | 185061 | 0 | 185061 | 5777152 |
| 4 | ಎಸ್.ಬಿ.ಐ | 62233843387 | 2015-16 | 5777152 | 29166528 | 672578 | 0 | 0 | 35616258 | 1410272 | 20000000 | 21410272 | 14205986 |
| 5 | ಎಸ್.ಬಿ.ಐ | 62233843387 | 2016-17 | 14228946 | 2995893 | 692138 | 0 | 0 | 17916977 | 1282242 | 0 | 1282242 | 16634735 |
| 6 | ಎಸ್.ಬಿ.ಐ | 62233843387 | 2017-18 | 16634735 | 924035 | 441756 | 0 | 0 | 18000526 | 1906069 | 10000000 | 11906069 | 6094457 |
| | ಕೆನರಾ ಬ್ಯಾಂಕ್ | 1071201001528 | 2016-17 | 0 | 129420 | 1094870 | 0 | 20000000 | 21224290 | 20231378 | 0 | 20231378 | 992912 |
| | | | 2017-18 | 992912 | 0 | 1387652 | 0 | 10000000 | 12380564 | 10075166 | 0 | 10075166 | 2305398 |
| | | | | 40750901 | 39028503 | 4441580 | 0 | 30000000 | 114220984 | 35093188 | 30000000 | 65093188 | 49127796 |

ಜಂಟಿ ನಿರ್ದೇಶಕರು,
ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ,
ಕಲಬುರಗಿ

## ಚಿತ್ತಾಪೂರ ನಗರ ಯೋಜನಾ ಪ್ರಾಧಿಕಾರ ಕಛೇರಿಯ 2017-18ನೇ ಸಾಲಿನ ಲೆಕ್ಕ ಪರಿಶೋಧನಾ ವರದಿ

| ವರ್ಷ | ಆಡಳಿತ ವರದಿ ವರ್ಷವಾರು ಪೂರ್ಣಗೊಳಿಸಿ ಸಿದ್ಧಪಡಿಸಬೇಕಾದ ದಿನಾಂಕ: | ವರ್ಷವಾರು ಆಡಳಿತ ವರದಿ ಸಿದ್ಧಪಡಿಸಿದ ದಿನಾಂಕ: | ವಿಳಂಬಕ್ಕೆ ಯಾವುದಾದರೂ ಕಾರಣಗಳು ಇದ್ದರೆ | ರಾಜ್ಯ ಲೆಕ್ಕ ಲೆಕ್ಕಪರಿಶೋಧನೆ ನಡೆಸಲು ಕೋರಿ ಬರೆದ ಪತ್ರದ ಉಲ್ಲೇಖ ಮತ್ತು ದಿನಾಂಕ: | ರಾಜ್ಯ ಲೆಕ್ಕ ಇಲಾಖೆಯವರಿಗೆ ಲೆಕ್ಕಪರಿಶೋಧನೆ ಪ್ರಾರಂಭಿಸಿದ ದಿನಾಂಕ ಮತ್ತು ಪೂರ್ಣಗೊಳಿಸಿದ ದಿನಾಂಕ: | ರಾಜ್ಯ ಲೆಕ್ಕ ಪರಿಶೋಧನಾ ಇಲಾಖೆಯವರಿಗೆ ಲೆಕ್ಕ ಪರಿಶೋಧನಾ ಪ್ರಮಾಣ ಪತ್ರವನ್ನು ನೀಡಿದ ಪತ್ರ ಉಲ್ಲೇಖ ಮತ್ತು ದಿನಾಂಕ: | ಅವುಗಳನ್ನು ಅಚ್ಚಿಗಾಗಿ ನೀಡಿದ ಮತ್ತು ಪ್ರತಿಗಳನ್ನು ಸ್ವೀಕರಿಸಿದ ದಿನಾಂಕ: | ಪ್ರತಿಗಳನ್ನು ಶಾಸಕಾಂಗ ಸಭೆಯಲ್ಲಿ ಸಚಿವಾಲಯಕ್ಕೆ ಸಲ್ಲಿಸಿದ ಪತ್ರದ ಉಲ್ಲೇಖ ಹಾಗೂ ದಿನಾಂಕ: | ಶಾಸಕಾಂಗ ಸಭೆಯಲ್ಲಿ ಮಂಡಿಸಲು ವಿಳಂಬಕ್ಕೆ ಕಾರಣಗಳು. | ಷರಾ |
|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 |
| 2017-18 | 01-04-2017 | 31-03-2017 | ಸಿಬ್ಬಂದಿ ಕೊರತೆ | ಸಂಖ್ಯೆ:ಸ್ಥಲೆವ/ ಆಡಿಟ್/2012 -13 ರಿಂದ 17-18/2018-19/111 ದಿನಾಂಕ: 17-05-2019 | 02-01-2019 ರಿಂದ 31-01-2019 | ಸಂಖ್ಯೆ:ಸ್ಥಲೆವ/ಆಡಿಟ್ /17-18/2018-19/ 289 ದಿನಾಂಕ: 26-07-2019 | 02-04-2018 | ---- | ಸಿಬ್ಬಂದಿಯ ಕೊರತೆಯಿಂದ ನಿಗಧಿತ ಸಮಯದಲ್ಲಿ ವರದಿಗಳನ್ನು ಸಲ್ಲಿಸಲು ವಿಳಂಬವಾಗಿದ್ದು ಸದರಿ ವಿಳಂಬಕ್ಕೆ ಸಹಮತಿ ನೀಡಲು ತಮ್ಮಲ್ಲಿ ವಿನಂತಿಸಿಕೊಳ್ಳಲಾಗಿದೆ. | |

ಸದಸ್ಯ ಕಾರ್ಯದರ್ಶಿ,
ನಗರ ಯೋಜನಾ ಪ್ರಾಧಿಕಾರ
ಚಿತ್ತಾಪೂರ.

# Town Planning Authority, Chittapura.

Bajaj Complex,1st Floor,Room No.B71, Bus Stand Road, Chittapura – 585211.
Kalaburagi District. Gmail: mstpChittapura56@gmail.com

No. No YoPra Chi/ KacheriAdesha/2023-24/ Dt. 05-02-2024.

To,

The Secretary,
Town Planning Department,
Bangalore.

Sir,

Sub: Submission of Booklets and CDs of Annual Reports of Town Planning Authority, Chittapura for the years 2017-18,2019-20, 2020-21 and Audit Reports for the years 2012-13 to 2017-18, 2018-19,2019-20,2020-21 reg.

Ref: Letter No. Aa Sa Pa. Ka Vi Sa Sa/ Sa Ka Pa/104/ Na e/2023-24 Dated 29-02-2024 of the Secretary, Legislative Assembly , Bangalore.

***

With reference to the above subject it was directed in the letter referred that 50 Booklets of Annual Reports of Town Planning Authority, Chittapura for the years 2017-18,2019-20, 2020-21 and Audit Reports for the years 2012-13 to 2017-18, 2018-19,2019-20,2020-21.

As per the orders the requested information with reasons and comments is submitted in Kannada 50 Copies and 250 CDs.

Sd/-
Member Secretary,
Town Planning Authority,
Chittapura .

Copies :

01. The Director, Town and Country Planning Department, Bangalore for information.
02. Office copy.

Sd/-
Member Secretary,
Town Planning Authority,
Chittapura .

**Government of Karnataka**

# Karnataka State Audit and Accounts Department

Office of the Joint Director,

Local Audit Circle,

Kalaburagi.

## Audit Report for the year from 2012-13 to 2017-18.

Town Planning Authority,

Chittapura.

## Part – I

## Town Planning Authority, Chittapura

## Audit Inspection Report from 2012-13 to 2017-18.

**Preamble:**

Urban Development Department through its order No.NaAa E 9Gu AaPra 2011 Dt. 12-03-2012 for local plan area Town and Country Planning Act 1961 clause 4(a) Local Planning Authorities have been declared. After that as per Town and Country Planning Act 1961 clause 4(c)(3) Town Planning Authority, Chittapura has been formed.

According to that notification apart from the President, Member Secretary the number of other members has been mentioned. In the same notification Assistant Director, Town Planning, Kalaburagi has been nominated as Member Secretary. And the Town Planning Authority, Chittapura has come into existence on 26-04-2012 during 2012-13.

The Joint Director,Local Audit Circle,Kalaburagi, in his letter No. Sta Le Va/ Audit/ Na YoPra. Chittapura/2018-19/851 Dt.24-12-2018 has instructed to audit the accounts of Town Planning Authority, Chittapura from 2006-07 to 2017-18 from 02-01-2019 to 31-01-2019. But the Member Secretary Town Planning Authority, Chittapura has in his letter has requested to audit from 2012-13 to 2017-18 as the authority has come in to existence only from 2012-13.

Hence statutory audit of the office of Town Planning Authority, Chittapura has been done from 2012-13 to 2017-18.

a) General Details:

1) Presidents:

Sri. D. K. Ravi, IAS,
Asst. Commissioner, Sedam 26-04-2012 to 23-02-2013.
Smt. B. Vijaya Jyotsna, IAS,
Asst. Commissioner, Sedam 23-02-2013 to 15-06-2013.
Sri. Harsha S. Shetty, KAS,
Asst. Commissioner, Sedam 15-06-2013 to 04-09-2013
Smt. B. Vijyaotsna, IAS,
Asst. Commissioner, Sedam 04-09-2012 to 31-12-2013
Sri.Prakash B Kudari, KAS,
Asst. Commissioner, Sedam 31-2-2012 to 05-03-2014
Sri.Bheema Shankar, KAS,
Asst. Commissioner, Sedam 05-03-2014 to 11-03-2015
Sri.ErappaSaibanna, Sa. Chittapura
Asst. Commissioner, Sedam 11-03-2015 to 28-08-2016
Sri.Bheema Shankar, KAS,
Asst. Commissioner, Sedam 29-08-2016 to 30-01-2017
Sri.Suryakantha B Pujari, Sa. Cittapur
30-01-2017 to 04-06-2018
Dr. B. Susheela, Asst. Commissioner, Sedam.
04-06-2018 to 31-03-2019

2. Member Secretary:

Sri. Prakash C. Harkude, Asst. Director, DTCP, Kalaburagi
21-06-2012 to 08-11-2012
Sri.Agadish S Doshetty, Asst. Director, DTCP, Kalaburagi
08-11-2012 to 21-01-2013
Sri. Sunil, Asst. Director, DTCP, Kalaburagi
21-01-2013 to 23-07 2015
Sri. Prakash C. Harkude, Asst. Director, DTCP, Kalaburagi
23-07-2015 to 31-07-2015
Sri.Visnu H Bandari, Asst. Director, DTCP, Kalaburagi
31-07-2015 to 12-05-2016
Sri.Tippanna S Mong, Asst. Director, DTCP, Kalaburagi
12-05-2016 to 31-03-2018

b) Auditing Team:

1. Auditors: Sri. N Jayaraju, Audit Officer,
Sri.Sharanabasappa, RK Auditor,
Sri.Sangameshwar, Auditor,
Smt. Kavitha, Auditor.
2. Audit start date: 02-01-2019
3. Audit closing date: 31-01-2019
4. Man days: 92
5. Inspection date: 25-04-2019
6. Inspecting officer: Smt. Bharathi, Joint Director.

c) This authority has come into existence during 2012-13 and has not been audited previously; hence there are no pending audit paras of the previous years.

| Sl. No. | Part | paras | Details | Objection Amount | Recovery Amount |
|---|---|---|---|---|---|
| | | | Nothing is there | | |

d) Details of current audit paras:

| Sl No. | Part | Para | Details | Objection Amount | Collected Amount |
|---|---|---|---|---|---|
| 1 | 2 | 5 | Penalty collected from Ms.CADME, Bangalore. | 0 | 42250 |
| 2 | 2 | 6 | Payments made without deducting Income Tax | 0 | 67007 |
| 3 | 2 | 7 | Demand Drafts returned to the agencies in violation of the rules | 0 | 40000 |
| 4 | 2 | 8 | Violation of KTPP Act 1999 and 2000 | 1303658 | 0 |
| 5 | 2 | 9 | Rent paid in violation of rules | 216000 | 0 |
| 6 | 2 | 10 | Non remittance of ESI amounts | 0 | 57065 |
| 7 | 2 | 12 | Not accounting Slum Cess in a different account | 43203 | 0 |
| 8 | 2 | 14 | Short collection of Development fee | 1484113 | 0 |
| 9 | 2 | 15 | Short collection of Audit Fee | 0 | 10000 |
| 10 | 2 | 16 | Short collection various charges of Plans | 0 | 15348 |
| 11 | 2 | 17 | Non Collection of Lake Fee (*Kerehonda*) | 0 | 1000000 |
| 12 | 2 | 19 | Short collection of Technical Fee *Binashethaki* | 0 | 16000 |
| | | | **Total** | **3046974** | **1247670** |

Sd/-

Joint Director,
Local Audit Circle,
Kalaburagi.

## Part – 2

# Details of current paras

1. Budget:

   As per Rule 22 of Karnataka Town and Country Planning Act 1961 a register of Income and Expenditure has to be prepared and presented in the General Meeting and only on approval the expenditure can be incurred.

   But from 2012-13 to 2017-18 approval of the President has not been obtained after preparing the budget.

   Hence budget may be prepared and the approval of the competent authority may be obtained and reported.

2. Financial Position:

   Financial position during the current financial year is as follows. Details are shown in Annexure – 2.

| Opening Balance | Credits | Total | Expenditure | Closing Balance |
|---|---|---|---|---|
| 40750901 | 73470083 | 114220984 | 65093188 | 49127796 |

3. Non submission of Annual Reports of the Authority:

   As per Rule 68 of Karnataka Town and Country Planning Act 1961 a report of details activities undertaken during a financial year has to be prepared and submitted to the Urban Development Dept. But from 2012-13 to 2017-18 no such report has been prepared.

   Hence a comprehensive report containing details of Plans approved, Building licences issued, Meetings held and other administrative and financial activities during each F Y may be prepared and submitted to the Government and the concerned departments.

4. Fixed Deposit Details:

   Town Planning Authority, Chittapura has kept Rs.3,00,00,000/- in fixed deposits for the FY 2012-13 to 2017-18. Details are as follows:

| Sl No | Name of the Bank | Amount | Account No. | Maturity Date |
|---|---|---|---|---|
| 1 | Canara Bank | 50,00,000 | 1071302000072/1 | 26-09-2019 |
| 2 | Canara Bank | 50,00,000 | 1071302000073/1 | 26-09-2019 |
| 3 | Canara Bank | 2,00,00,000 | 1071302000066/1 | 28-06-2019 |
| | **Total** | **3,00,00,000** | | |

5. Collecting penalty from M/s. CADME, Bangalore:

   A Tender has been called for digitising the Chittapura Town Mega Plan and the work has been entrusted to M/s. CADME, Bangalore for Rs.8,85,000- and an agreement is signed accordingly on 26-04-2014. According to Chapter-2 and 3 of the agreement conditions, if the work is not completed within the stipulated time a fine of Rs.50- per day of delay or 5% penalty may be levied.

   - Agreement amount : 8,85,000-
   - Agreement Date : 26-04-2014
   - Deadline for completion: 225 days.

